ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ

Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

KANNADA MATHRUBHOOMI

KANNADA DAILY PAPER

ಸಂಪಾದಕರು : ಶ್ಯಾಮ್ ಸುಂದರ್.ಎಲ್

EDITOR : SHYAM SUNDER L

mathrubhoomircr@gmail.com

Call : 9886635117

ಸಂಪುಟ : / Volume : 03 | ಸಂಚಿಕೆ / Issue : 134 | ದಿನಾಂಕ : 23-06-2026 ಮಂಗಳವಾರ / Date : 23-06-2026 Tuesday | RNI: Karkan/2023/89199 | Post Reg No.: RCR/L/RNP/98/2025-2027 | ರಾಯಚೂರು / Raichur | ಪುಟ : / Pages : 04 | ರೂ / Rs. 2

## 17 ಶಾಸಕರ ಖರೀದಿಸಿ 2019ರಲ್ಲಿ ಸರ್ಕಾರ ರಚಿಸಿತ್ತಾ ಬಿಜೆಪಿ?: ಈಶ್ವರಪ್ಪ ಹೇಳಿಕೆ ಬೆನ್ನಲ್ಲೇ ಮತ್ತೆ ಮುನ್ನೆಲೆಗೆ ಬಂದ ಚರ್ಚೆ

**ಶಿವಮೊಗ್ಗ, ಜೂ.22**-17 ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಜುಲೈ 23, 2019ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ಬಹುಮತ ಕಳೆದುಕೊಂಡು ಪತನಗೊಂಡಿತ್ತು. ಬಳಿಕ ಜುಲೈ 26, 2019ರಂದು ಬಿ.ಎಸ್. ಯಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಈ ವೇಳೆ ಬಿಜೆಪಿ ಕುದುರೆ ವ್ಯಾಪಾರ ನಡೆಸಿರುವ ಆರೋಪವನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಮಾಡಿದ್ದವು. ಆದರೆ ಬಿಜೆಪಿ ಮಾತ್ರ ಇದನ್ನು ಅಲ್ಲಗಳೆದಿತ್ತು. ಆದರೀಗ ಮಾಜಿ ಸಚಿವ, ಬಿಜೆಪಿಯಿಂದ ಉಚ್ಚಾಟಿತರಾಗಿರುವ ➘4

## ಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಫೇಸ್‌ಬುಕ್ ಖಾತೆಗಳ ವಿರುದ್ಧ ಎಫ್‌ಐಆರ್ ದಾಖಲು

**ಬೆಂಗಳೂರು,ಜೂ.22**-ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹಾಗೂ ಅವಹೇಳನಕಾರಿ ಮಾಹಿತಿ ಹಂಚಿಕೆ ಮಾಡಿದ ಆರೋಪದ ಮೇಲೆ ಕೆಲವು ಫೇಸ್‌ಬುಕ್ ಖಾತೆಗಳ ನಿರ್ವಾಹಕರ ವಿರುದ್ಧ ಬೆಂಗಳೂರು ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಜೂನ್ 20ರಂದು ವಕೀಲ ದೀಪು ಸಿ.ಆರ್. ನೀಡಿದ ದೂರಿನ ಆಧಾರದ ಮೇಲೆ ಈ ಪ್ರಕರಣ ದಾಖಲಾಗಿದೆ.

ಎಫ್‌ಐಆರ್ ಪ್ರಕಾರ, ಜೂನ್ 17ರಂದು **'Kumaraswamy for CM'** ಹಾಗೂ **'Janata Dal Secular'** ಹೆಸರಿನ ಫೇಸ್‌ಬುಕ್ ಖಾತೆಗಳಲ್ಲಿ ಹಳೆಯ ಚಾಳಿ ಮತ್ತೆ ಆರಂಭ; ಹುಟ್ಟು ➘4

## ನನ್ಹೆ ಫರಿಶ್ತೆ: ಆರ್‌ಪಿಎಫ್ ಕಾರ್ಯಾಚರಣೆ ಮೂಲಕ ಓಡಿಹೋದ ಮಕ್ಕಳ ರಕ್ಷಣೆ

**ಮೈಸೂರು,ಜೂ.22**-ನನ್ಹೆ ಫರಿಶ್ತೆ ಯೋಜನೆಯಡಿ ಭಾನುವಾರ ಯಾವುದೇ ಪ್ರಯಾಣದ ದಾಖಲೆಗಳಿಲ್ಲದೆ ರೈಲಿನಲ್ಲಿ ಒಂಟಿಯಾಗಿ ಪ್ರಯಾಣಿಸುತ್ತಿದ್ದ ಇಬ್ಬರು ಮಕ್ಕಳನ್ನು ರಕ್ಷಿಸಲಾಗಿದೆ.

ರೈಲು ಸಂಖ್ಯೆ 17309ರ ಎಸ್-8 ಬೋಗಿಯಲ್ಲಿ ಇಬ್ಬರು ಮಕ್ಕಳು ಪ್ರಯಾಣಿಸುತ್ತಿರುವ ಕುರಿತು ಮೈಸೂರು ವಿಭಾಗೀಯ ಭದ್ರತಾ ನಿಯಂತ್ರಣ ಕೊಠಡಿಯಿಂದ ಮಾಹಿತಿ ಬಂದ ತಕ್ಷಣ, ಅರಸೀಕೆರೆ ಆರ್‌ಪಿಎಫ್ ಉಪನಿರೀಕ್ಷಕರು ಹಾಗೂ ಸಿಬ್ಬಂದಿ ರೈಲಿಗೆ ತೆರಳಿ ಮಕ್ಕಳನ್ನು ವಶಕ್ಕೆ ಪಡೆದರು. ವಿಚಾರಣೆ ವೇಳೆ, 11 ಮತ್ತು 12 ವರ್ಷದ ಈ ಮಕ್ಕಳು ತುಮಕೂರಿನ ಶಾಲೆಯೊಂದರ ವಸತಿ ನಿಲಯದಲ್ಲಿ ವಾಸವಾಗಿದ್ದು, ಮೊಹರಂ ರಜೆ ಹಿನ್ನೆಲೆಯಲ್ಲಿ ತಮ್ಮ ಸಹಪಾಠಿಗಳ ಮನೆಗೆ ➘4

# ಸಂಪುಟ ವಿಸ್ತರಣೆಗೆ 5% ಸರ್ಕಾರಿ ಸೀಟು, 95% ಪೇಮೆಂಟ್ ಸೀಟು ನಿಗದಿಯಾಗಿದೆಯಂತೆ: ಹೆಚ್‌ಡಿಕೆ



■ ಕನ್ನಡ ಮಾತೃ ಭೂಮಿ ವಾರ್ತೆ

**ಬೆಂಗಳೂರು,ಜೂ.22**-ಸಂಪುಟ ವಿಸ್ತರಣೆಗೆ 5% ಸರ್ಕಾರಿ ಸೀಟು, 95% ಮ್ಯಾನೇಜ್‌ಮೆಂಟ್ ಸೀಟು ಇದೆಯಂತೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಜೆ.ಪಿ.ಭವನದಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಂಪುಟ ವಿಸ್ತರಣೆಯಲ್ಲಿ 5% ಸರ್ಕಾರಿ ಕೋಟಾ ಹಾಗೂ 95% ಮ್ಯಾನೇಜ್‌ಮೆಂಟ್ ಸೀಟ್ ಅಂತ ಚರ್ಚೆ ಆಗುತ್ತಿದೆ. ಈ ರೀತಿ ನಾನು ಹಿಂದೆಂದೂ ಕೇಳಿರಲಿಲ್ಲ. ನನಗೆ ಇದು ಇನ್ನೂ ಅರ್ಥ ಆಗಿಲ್ಲ. ನಾನು ಇಂಜಿನಿಯರಿಂಗ್, ಮೆಡಿಕಲ್ ಸೀಟ್‌ನಲ್ಲಿ ಈ ಮೆರಿಟ್ ಸೀಟ್, ಮ್ಯಾನೇಜ್‌ಮೆಂಟ್ ಸೀಟ್ ಅಂತ ಕೇಳಿದ್ದೇನೆ. ಆದರೆ, ಈಗ ಅದು ಸಂಪುಟ ವಿಸ್ತರಣೆಯಲ್ಲೂ ಕೇಳಿ ಬರುತ್ತಿದೆ. 5% ಮೆರಿಟ್ ಸೀಟ್, ಉಳಿದ 95% ಎಲ್ಲವೂ ಪೇಮೆಂಟ್ ಸೀಟ್ ಆಗಿದೆ. ಆ ಮೂಲಕ ಲೂಟಿ ಹೊಡೆಯುತ್ತಿದ್ದಾರೆ ಎಂದರು. ಯಾರನ್ನಾದರೂ ಬ್ಲ್ಯಾಕ್ ಮೇಲ್ ಮಾಡುತ್ತಾರೆ: ಬಿಜೆಪಿಯಿಂದ ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಆಣೆ ಮಾಡುವುದು ತಪ್ಪು ಅನ್ನಲ್ಲ. ಇದು ಮುಗಿದು ಹೋದ ಅಧ್ಯಾಯ. ಯಾರನ್ನೂ ಬೇಕಾದರೂ ಬ್ಲ್ಯಾಕ್ ಮೇಲ್ ಮಾಡುತ್ತಾರೆ. ಇಲ್ಲಿ ಪ್ರಶ್ನೆ ಇರುವುದು ಮ್ಯಾನ್ ಪರ್ವ, ಮಸಲ್ ಪರ್ವ, ಮನಿ ಪವರ್ ಎಂದು ಟೀಕಿಸಿದರು.

ಈ ಸಂಬಂಧ ಯಾರೂ ಆತಂಕಕ್ಕೆ ಒಳಗಾಗುವುದು ಬೇಡ. ಬಿಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್ ಶಾಸಕರ ಕ್ಷೇತ್ರದಲ್ಲೂ ಅಭಿವೃದ್ಧಿ

ಕುಂಠಿತವಾಗಿದೆ. ಈಗಿನ ಸಿಎಂ ಬಹಳ ಧಾರಾಳವಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ರೂ ಕೊಡ್ತೇನೆ ಅಂದಿದ್ದಾರೆ. ಆ ಹಿನ್ನೆಲೆಯಲ್ಲಿ ಕ್ರಾಸ್ ವೋಟಿಂಗ್ ಆಗಿದೆ. ನಾವು ಈ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ನಾವು 2028ಕ್ಕೆ ಈ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಕೆಲಸ ಮಾಡೋಣ ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಕಾರ್ಯಕ್ರಮದಿಂದ ನೀಟ್ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಿದೆ: ನಿನ್ನೆ ನೀಟ್ ಪರೀಕ್ಷೆ ವೇಳೆ ಕೆಲವು ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಿದೆ. ವಿದ್ಯಾರ್ಥಿಗಳ ಪ್ರವೇಶಕ್ಕೆ ತೊಂದರೆ ಆಗಿದೆ. ಇ

ದಕ್ಕೆ ಕಾರಣ ಕಾಂಗ್ರೆಸ್ಸಿನ ನಿನ್ನೆಯ ಕಾರ್ಯಕ್ರಮ. ಇದರಿಂದ ನಗರದ ಸುತ್ತಮುತ್ತ ವಾಹನ ದಟ್ಟಣೆ ಉಂಟಾಗಿತ್ತು. ಪಿಎಂ ಏರ್‌ಪೋರ್ಟನಿಂದ ಅವರ ನಿವಾಸಕ್ಕೆ ಹೋಗುವಾಗ ರಸ್ತೆ ಬಂದ್ ಮಾಡುತ್ತಾರೆ ಅಂತ, ಇದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗುತ್ತೆ ಅಂತ ಏರ್ ಪೋರ್ಟ್‌ನಲ್ಲೇ 45 ನಿಮಿಷ ಕಾದಿದ್ದರು. ವಿದ್ಯಾರ್ಥಿಗಳಿಗೆ ಸಮಸ್ಯೆ ಆಗದಂತೆ ಏರ್ ಪೋರ್ಟ್‌ನಲ್ಲೇ ಉಳಿದುಕೊಂಡಿದ್ದರು. ಅದು ಮುಂಜಾಗ್ರತಾ ಕ್ರಮ. ಅದನ್ನು ನೋಡಿ ಕಲಿತುಕೊಳ್ಳಿ ಎಂದು ತಿಳಿಸಿದರು.

### ರೂಢಿಗತ ರೌಡಿಗಳ ನಿಯಂತ್ರಣಕ್ಕೆ ನಾಲ್ಕು ಜನರ ಗಡಿಪಾರು

# ಐದು ಜನ ರೌಡಿಗಳ ಗಡಿಪಾರಿಗೆ ಪ್ರಸ್ತಾವನೆ-ಎಸ್ಪಿ ಅರುಣಾಂಗ್ಷಿಗಿರಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.23**-ಜಿಲ್ಲೆಯಲ್ಲಿ 1561 ರೌಡಿ ಶೀಟರ್‌ಗಳಿದ್ದು, ಅವರಲ್ಲಿ 39 ಜನರ ವಿರುದ್ಧ ಗಡಿಪಾರು ಪ್ರಸ್ತಾವನೆಯನ್ನು ಕಳಿಸಲಾಗಿದ್ದು, ಇದೀಗ 4 ಜನರ ಗಡಿಪಾರು ಆದೇಶ ಮಂಜೂರಾಗಿದೆ. ಜೊತೆಗೆ 5 ರೌಡಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಸ್ತಾವನೆಯನ್ನೂ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷುಗಿರಿ ಹೇಳಿದರು.

ಅವರಿಂದು ನಗರದ ಪೊಲೀಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಗುಂಪು ಘರ್ಷಣೆ ಸೇರಿದಂತೆ ಇತರೆ ಅಹಿತಕರ ಘಟನೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿರುವ ಪ್ರತಿ ಠಾಣೆಯ ವ್ಯಾಪ್ತಿಯಲ್ಲಿ 103 ಮನೆಗಳನ್ನು ತಪಾಸಣೆ ಮಾಡಲಾಗಿದ್ದು, 748 ರೌಡಿಗಳ ಪರೇಡ್ ಮಾಡಲಾಗಿದೆ. ಈಗಾಗಲೇ ಜಿಲ್ಲೆಯ 29 ಗ್ರಾಮಗಳಲ್ಲಿ ಮೊಹರಂ ಆಚರಣೆಯನ್ನು ನಿರ್ಭಂಧಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದು, ಮೊಹರಂ ಹಬ್ಬವನ್ನು ಶಾಂತಿಯುತವಾಗಿ ಆಚರಣೆ ಮಾಡಲು ಇಲಾಖೆಯಿಂದ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ 730 ಸ್ಥಳಗಳಲ್ಲಿ ಮೊಹರಂ ಆಚರಣೆ ಮಾಡಲಾಗುತ್ತದೆ. ಐತಿಹಾಸಿಕ ಮುದಗಲ್ ಮೊಹರಂ ಕೂಡ ಒಳಗೊಂಡಿದ್ದು, ಮುದಗಲ್ ಮೊಹರಂ ಒಂದರಲ್ಲಿಯೇ 1.5 ಲಕ್ಷ ಜನರು ಸೇರುವ ಸಾಧ್ಯತೆ ಇದ್ದು, ಶಾಂತಿ ಸಭೆಯನ್ನು ನಡೆಸಲಾಗಿದೆ. ಬಂದೋಬಸ್ತ್‌ಗಾಗಿ ವಿಶೇಷವಾಗಿ ಮಾಜಿ ಪೊಲೀಸರಿಗೂ ಮನವಿ ಮಾಡಿ ಭದ್ರತೆಗೆ ನಿಯೋಜಿಸಲಾಗುತ್ತದೆ ಎಂದು ಹೇಳಿದರು.

ನಗರದ ಕುಲಸುಂಬಿ ಕಾಲೋನಿಯ ನಿವಾಸಿ ತಿರುಪತಿ(30) ಕೊಲೆ ಪ್ರಕರಣವನ್ನು ರಾಯಚೂರು ಪಶ್ಚಿಮ ಠಾಣೆ ಪೊಲೀಸರು ಕೇವಲ 24 ಗಂಟೆಗಳಲ್ಲೇ ಭೇದಿಸಿ, ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳಿಂದ ಮೃತನ ರುಂಡವನ್ನು ವಶಪಡಿಸಿಕೊಳ್ಳಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆ ಮುಂದುವರಿದಿದೆ ಎಂದರು.

ಜೂ.21 ರಂದು ಕೊಲೆಯಾದ ತಿರುಪತಿಯ ತಂದೆ ವೆಂಕೋಬ ರಾಯಚೂರು ಪಶ್ಚಿಮ ಪೊಲೀಸ್ ಠಾಣೆಗೆ ದೂರು ಸಲ್ಲಿಸಿ, ತಮ್ಮ ಮಗನನ್ನು ದುಷ್ಕರ್ಮಿಗಳು ಕೊಲೆ ಮಾಡಿ ರುಂಡವನ್ನು ತೆಗೆದುಕೊಂಡು ಹೋಗಿರುವುದಾಗಿ ಆರೋಪಿಸಿದ್ದರು. ದೂರಿನ ಮೇರೆಗೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ವಿಶೇಷ ತನಿಖಾ ➘4

## ಜೂ.25 ರಂದು ರೈಲ್ವೆ ಪರೀಕ್ಷೆ ರದ್ದುಗೊಳಿಸಲು ಆಗ್ರಹಿಸಿ ಕೇಂದ್ರ ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ-ವಿನೋಧರೆಡ್ಡಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.22**-ಜೂ.25 ರಂದು ನಡೆಯಲಿರುವ ರೈಲ್ವೆ ಇಲಾಖೆ ಗೂಡ್ಸ್ ಟ್ರೇನ ಮ್ಯಾನಜರ್ ಹುದ್ದೆ ಪರೀಕ್ಷೆಯಲ್ಲಿ ಕನ್ನಡ ಭಾಷಾ ಅವಕಾಶ ನೀಡದೇ ಇರುವದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ರೈಲ್ವೆ ನಿಲ್ದಾಣ ಸೇರಿದಂತೆ ಕೇಂದ್ರ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ವಿನೋದರೆಡ್ಡಿ ಹೇಳಿದರು/

ಅವರಿಂದು ಮಾಧ್ಯಮಗೋಷ್ಟಿಉದ್ದೇಶಿಸಿ ಮಾತನಾಡಿ ಕೇಂದ್ರ ಸರ್ಕಾರ ಪ್ರತಿಬಾರಿಯೂ ಕೇಂದ್ರ ವಿವಿಧ ಇಲಾಖೆಗಳಿಂದ ನಡೆಸುವ ಪರೀಕ್ಷೆಯಲ್ಲಿ ಕನ್ನಡ ಭಾಷೆಗೆ ಮಾತ್ರ ತಾರತಮ್ಯ ಮಾಡುತ್ತಲೇ ಬಂದಿದೆ.

ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಲು ಅವಕಾಶವಿದ್ದರೂ ದುರುದ್ದೇಶದಿಂದ ಅವಕಾಶ ನೀಡುತ್ತಿಲ್ಲ.

ಜೂ.25 ರಂದು ನೈರುತ್ಯ ರೈಲ್ವೆಯ ಹುಬ್ಬಳ್ಳಿ 179,ಬೆಂಗಳೂರು 112, ಮೈಸೂರು139 ಹುದ್ದೆಗಳಿಗೆ ಪರೀಕ್ಷೆ ನಿಗಧಿಯಾಗಿದೆ. ➘4

## ಖಾಲಿಯಾಗುತ್ತಿರುವ ಗಣೇಶಕಲ್ ಜಲಾಶಯ ಕೆರೆಗಳ ಭರ್ತಿಗೆ ಶಾಸಕ ಡಾ.ಶಿವರಾಜ ಪಾಟೀಲ್ ಸೂಚನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.23**-ಕುಡಿಯುವ ನೀರಿನ ಸಮಸ್ಯೆ ಮುಂದಿನ ದಿನಗಳಲ್ಲಿ ಸಾಕಷ್ಟು ತೊಂದರೆಯಾಗುವ ಹಿನ್ನೆಲೆಯಲ್ಲಿ ಗಣೇಕಲ್ ಜಲಾಶಯದಿಂದ ರಾಂಪೂರ ಕೆರೆಗೆ ನೀರು ತುಂಬಿಸುವ ಕೆಲಸ ತ್ವರಿತ ಗತಿಯಲ್ಲಿ ಮಾಡಬೇಕು, ಎಲ್ಲಾ ವಾರ್ಡ್‌ಗಳಿಗೆ ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕು ಎಂದು ಶಾಸಕ ಶಿವರಾಜ ಪಾಟೀಲ್ ಹೇಳಿದರು.

ಅವರಿಂದು ನಗರದ ಮಹಾ ನಗರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಕುಡಿಯುವ ನೀರು ಸರಬರಾಜು ಕುರಿತು ತುರ್ತು ಸಭೆ ನಡೆಸಿ ಮಾತನಾಡಿದರು, ಮುಂದಿನ ದಿನಗಳಲ್ಲಿ ಮಳೆಯಾಗುವ ಯಾವುದೇ ರೀತಿಯ ವಾತಾವರಣವಿಲ್ಲ ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಮಳೆ ಆಗುವ ಸಾಧ್ಯತೆಗಳು ಸಾಕಷ್ಟು ಕಡಿಮೆ ಇದೆ ಎಂದು ಮಾಹಿತಿ ಬಂದ ಹಿನ್ನೆಲೆಯಲ್ಲಿ ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಆಗುವ ಮುಂಚಿತವಾಗಿ ವಾರ್ಡ್ ➘4

## ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಹುಸಿ ಬಾಂಬ್ ಬೆದರಿಕೆ: ಬಿಗಿ ಭದ್ರತೆ, ತೀವ್ರ ತಪಾಸಣೆ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.23**-ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಬೆದರಿಕೆ ಸಂದೇಶದ ಮಾಹಿತಿ ತಿಳಿದ ತಕ್ಷಣ ನ್ಯಾಯಾಧೀಶರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ನ್ಯಾಯಾಲಯದ ಸುತ್ತಮುತ್ತ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗಿದೆ.

ನ್ಯಾಯಾಲಯದ ಮುಖ್ಯ ಪ್ರವೇಶ ದ್ವಾರದಲ್ಲಿ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಕಟ್ಟುನಿಟ್ಟಾಗಿ ತಪಾಸಣೆ ನಡೆಸಿದ ಬಳಿಕವೇ ಒಳ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ. ಪ್ರತಿಯೊಬ್ಬರ ಬ್ಯಾಗ್‌ಗಳು ಮತ್ತು ಇತರೆ ವಸ್ತುಗಳನ್ನು ಪರಿಶೀಲಿಸಿ ಭದ್ರತಾ ಕ್ರಮಗಳನ್ನು ಪಾಲಿಸಲಾಗುತ್ತಿದೆ.

ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ, ಶ್ವಾನದಳ ಸೇರಿದಂತೆ ವಿವಿಧ ಪೊಲೀಸರು ನ್ಯಾಯಾಲಯದ ಆವರಣವನ್ನು ಸಂಪೂರ್ಣವಾಗಿ ➘4



## ಜೂ.21ರಂದು ಕನಕದಾಸರ ಮುತ್ತು ಬಂದಿದೆ ಕೇರೆಗೆ ನೃತ್ಯ ರೂಪಕ ಪ್ರದರ್ಶನ-ಶೇಖರ ವಾರದ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.23**-ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಜೂ.25 ರಂದು ಸಂತಕವಿ ಕನಕದಾಸರ ಮುತ್ತು ಬಂದಿದೆ ಕೇರಿಗೆ ನೃತ್ಯರೂಪಕ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಕುರುಬ ಸಮಾಜ ನಗರ ಅಧ್ಯಕ್ಷ ಶೇಖರ ವಾರದ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿಉದ್ದೇಶಿಸಿ ಮಾತನಾಡಿ, ಪ್ರಥಮಬಾರಿಗೆ ಕನಕದಾಸರ ಕುರಿತಾನೃತ್ಯರೂಪಕ ಪ್ರದರ್ಶನಗೊಳ್ಳಲಿದ್ದು ಎಲ್ಲಾ ಸಮಾಜದವರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದರು.

ಚಲನಚಿತ್ರ ನಟ ಡಿಂಗ್ರಿ ನರೇಶ ಮಾತನಾಡಿ, ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದಿರುವ ಸ್ನೇಹಾ ಕಪ್ಪಣ್ಣ ಇವರ ನೃತ್ತ ಸಂಯೋಜನೆಯನೆಯಲ್ಲಿ ಕನಕದಾಸರ ಮುತ್ತುಬಂದಿದೆ ಕೇರಿಗೆ ನೃತ್ಯರೂಪಕ 25 ಕಲಾವಿದರಿಂದ 75 ನಿಮಿಷ ಪ್ರದರ್ಶನವಾಗುತ್ತದೆ. ಖ್ಯಾತ ನೃತ್ಯರೂಪಕ ಸಂಯೋಜಕ ಡಾ,ಪ್ರವೀಣರಾವ್ ಇವರು ನೃತ್ಯ ಸಂಯೋಜಿಸಿದ್ದಾರೆ .ಕಾ.ತ .ಚಿಕ್ಕಣ್ಣ ಪರಿಕಲ್ಪನೆ, ಸಾಹಿತ್ಯದ ಬ್ರಮರಿ ಡ್ಯಾನ್ಸ್ ರೆಪರ್ಟರಿ ಕಲಾವಿದರೂ ಪ್ರದರ್ಶನ ನೀಡಲಿದ್ದಾರೆ. ಜಾತಿ, ಕುಲ,ವರ್ಗ,ವರ್ಣ ಮೌಢ್ಯ ತಾರತಮ್ಯಗಳ ವಿರುದ್ಧ ಕನಕದಾಸರು ಸಮಾಝಕ್ಕೆ ಬೋಧಿಸಿದ ಆದರ್ಶಗಳನ್ನು ಜನರಿಗೆತಲುಪಿಸಲು ರಾಜ್ಯದಾಧ್ಯಂತ ನೃತ್ಯರೂಪಕ ಪ್ರದರ್ಶನವಾಗುತ್ತಿದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಇವರು ಭಾಗವಹಿಸಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಸಿ.ಬಿ.ಚಿಲಕದ, ನಾಗವೇಣಿ, ಹನುಮಂತಪ್ಪಪ, ರಾಮಣ್ಣ ರಘುನಾಥನಹಳ್ಳಿ, ರಾಮಚಂದ್ರಪ್ಪ, ನಾಗರಾಜ ವಕೀಲ, ನಾಗರಾಜ ಸೇರಿ ಅನೇಕರಿದ್ದರು. ➘4

### ಆರೋಗ್ಯಮಯ ಜೀವನದತ್ತ ಒಂದು ಹೆಜ್ಜೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

# ಒತ್ತಡ, ಆತಂಕ ಸಂದರ್ಭದಲ್ಲಿ ಯೋಗ ಅಭ್ಯಾಸವು ಅಗತ್ಯ - ಪೋಲಾ ರಾಧಾಕೃಷ್ಣ

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ** ಯೋಗವು ದೈಹಿಕ, ಮಾನಸಿಕ ಮತ್ತು ಆತ್ಮದ ಸಮತೋಲನವನ್ನು ಸಾಧಿಸುವ ಜೀವನಶೈಲಿಯೊಂದಿಗೆ, ಇಂದಿನ ವೇಗದ ಜೀವನದಲ್ಲಿ ಒತ್ತಡ ಮತ್ತು ಆತಂಕ ಹೆಚ್ಚುತ್ತಿರುವ ಸಂದರ್ಭದಲ್ಲಿ ಯೋಗ ಅಭ್ಯಾಸವು ಅತ್ಯಂತ ಅಗತ್ಯವಾಗಿದೆ ಎಂದು ಮುಖ್ಯ ಅತಿಥಿಗಳಾದ ಪೋಲಾ ರಾಧಾಕೃಷ್ಣರವರು ತಿಳಿಸಿದ್ದಾರೆ.

ನಗರದ ಹೆಸರಾಂತ ರಾಕ್ ಗಾರ್ಡನ್ ಹೋಟೆಲ್ ನಲ್ಲಿ ಯೋಗಶ್ರೀ ಅಯ್ಯಂಗಾರ್ ಯೋಗ ಕೇಂದ್ರ, ವತಿಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಜೃಂಭಣೆಯಿಂದ ಭಾನುವಾರದಂದು ಆಚರಿಸಲಾಯಿತು.

ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯ ಕ್ರಮ ಆರಂಭವಾಯಿತು. ಪ್ರಾರ್ಥನೆಯ ಸೊಬಗಿನೊಂದಿಗೆ




ಸಮಾರಂಭಕ್ಕೆ ಭಕ್ತಿಭಾವಪೂರ್ಣ ಹಾಗೂ ಶಿಸ್ತುಬದ್ಧ ವಾತಾವರಣ ನಿರ್ಮಾಣವಾಯಿತು.

ಅತಿಥಿಗಳಾದ ಪೋಲಾ ರಾಧಾಕೃಷ್ಣ ಅವರು ಮಾತನಾಡಿ, ಯೋಗಶ್ರೀ ಅಯ್ಯಂಗಾರ್ ಕೇಂದ್ರವು ನಗರದಲ್ಲಿ 12 ವರ್ಷಗಳಿಂದ ಸತತವಾಗಿ ಜನರಲ್ಲಿ ಅಯ್ಯಂಗಾರ್ ಯೋಗ ಭೋಧಿಸುತ್ತದ್ದು, ಸರಿಯಾದ ಕ್ರಮದಲ್ಲಿ ಹೇಳಿಕೊಡುವುದಲ್ಲದೆ, ಬಳ್ಳಾರಿ ಜನತೆಯಲ್ಲಿ ಜಾಗೃತಿಯನ್ನು ಮೂಡಿಸುತಿದ್ದಾರೆ. ಇಂದಿನ ಒತ್ತಡದ ಜೀವನ ಶೈಲಿ ಕುಟುಂಬದಲ್ಲಿನ ಸಾಮರಸ್ಯತೆ ಬೆಳೆಸಲು, ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ಜಾಗೃತಿಯ ಬೆಳೆಯಲು ಅತ್ಯಂತ ಅವಶ್ಯವಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಡಾ. ರವಿಶಂಕರ್ ರವರು ಮಾತನಾಡಿ, ಯೋಗದ ವೈಜ್ಞಾನಿಕ ಮಹತ್ವ, ಯೋಗ ಮತ್ತು ಪ್ರಾಣಾಯಾಮವು ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಏಕಾಗ್ರತೆ ಹಾಗೂ ಆರೋಗ್ಯವನ್ನು ಹೆಚ್ಚಿಸುತ್ತದೆ ಮತ್ತು ಮೊಬೈಲ್ ಮತ್ತು ಅತಿಯಾದ ತಂತ್ರಜ್ಞಾನ ಬಳಕೆಯಿಂದ ದೂರವಿದ್ದು, ಶರೀರದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮನೆಯಿಂದ ಹೊರಗೆ ಬಂದು ಸರಿಯಾದ ಗುರುಗಳ ಮಾರ್ಗದರ್ಶನದಲ್ಲಿ ಅಭ್ಯಾಸವನ್ನು ಕೈಗೊಂಡು ರೋಗಗಳು ಬರದೆ ಇರಲು ಮುಂಜಾಗ್ರತೆಯನ್ನು ವಹಿಸಲು ಯೋಗ ಅತ್ಯಂತ ಸಹಾಯಗುತ್ತದೆ. ಎಲ್ಲರಿಗೂ ಆರೋಗ್ಯಕರ ಜೀವನಶೈ ಲಿಯನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿ, ಯೋಗವು ಜೀವನದ ಒಂದು ಶಿಸ್ತು ಎಂಬ ಪ್ರೇರಣಾದಾಯಕ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಯೋಗಶ್ರೀ ಅಯ್ಯಂಗಾರ್ ಯೋಗ ಕೇಂದ್ರದ ಗುರುಗಳಾದ ವಿರೂಪಾಕ್ಷ ಡಾಣಿ ರವರು ಮಾತನಾಡುತ್ತಾ, ಬಳ್ಳಾರಿಯಲ್ಲಿರುವ ಯೋಗಶ್ರೀ ಅಯ್ಯಂಗಾರ್ ಯೋಗ ಕೇಂದ್ರವು ಯೋಗ ಶಿಕ್ಷಣ ಮತ್ತು ಸರಿಯಾದ ಯೋಗಾಭ್ಯಾಸ ಕ್ರಮವನ್ನು ಉತ್ತೇಜಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಮತ್ತು ಅನೇಕ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಯೋಗದ ಶಿಸ್ತಿನ ತರಬೇತಿ ನೀಡಿ ಆರೋಗ್ಯಕರ ಜೀವನಶೈಲಿಯನ್ನು ಬೆಳೆಸಲು ಈ ಕೇಂದ್ರವು ಸಹಕಾರಿಯಾಗಿದೆ ಎಂದು ವೇದಿಕೆಗೆ ವಿವರಿಸಿದರು. ಕನ್ನಡದವರೇ ಆದ ಯೋಗ ಭೀಷ್ಮ, ಆಧುನಿಕ ಯೋಗದ ಪಿತಾಮಹರೆನಿಸಿದ ಪದ್ಮ ವಿಭೂಷಣ ಗೂರೂಜಿ ಬಿ.ಕೆ.ಎಸ್. ಅಯ್ಯಂಗಾರ್ ಯೋಗ ಪದ್ಧತಿಯೂ ಜಗತ್ತಿನಾದ್ಯಂತ ಜನಪ್ರಿಯವಾಗಿದೆ. ಪರಿಕರಗಳನ್ನು ಬಳಸಿ ಸುಲಭವಾಗಿ ಸರಿಯಾದ ಕ್ರಮದಲ್ಲಿ ಹೇಗೆ ಅಭ್ಯಾಸಿಸಬಹುದು ಎಂದು ಪ್ರಾತ್ಯಕ್ಷಿಕೆಯನ್ನು ತೋರಿಸಿದರು.

ವಿದ್ಯಾರ್ಥಿಗಳು ತಮ್ಮ ಯೋಗ ದಿನಾಚರಣೆಯ ಅನುಭವಗಳನ್ನು ಹಂಚಿಕೊಂಡು, ಯೋಗಾಸನಗಳು ಮತ್ತು ಪ್ರಾಣಾಯಾಮದ ಮೂಲಕ ತಮ್ಮ ದೇಹ ಮತ್ತು ಮನಸ್ಸಿನಲ್ಲಿ ಕಂಡ ಬದಲಾವಣೆಗಳನ್ನು ವಿವರಿಸಿದರು. ಯೋಗಾಭ್ಯಾಸದಿಂದ ಏಕಾಗ್ರತೆ ಹೆಚ್ಚಿದಂತೆ ಮತ್ತು ಮನಸ್ಸಿಗೆ ಶಾಂತಿ ದೊರೆತಂತೆ ತಮ್ಮ ಅನುಭವಗಳನ್ನು ಹರ್ಷದಿಂದ ವ್ಯಕ್ತಪಡಿಸುತ್ತಾ, ಇಂತಹ ಕಾರ್ಯಕ್ರಮಗಳು ತಮಗೆ ಆರೋಗ್ಯಕರ ಜೀವನದ ಮಹತ್ವವನ್ನು ತಿಳಿಸಿವೆ ಎಂದು ವಿದ್ಯಾರ್ಥಿಗಳು ಹೇಳಿದರು. ಯೋಗಶ್ರೀ ಅಯ್ಯಂಗಾರ್ ಯೋಗ ಕೇಂದ್ರದ ವತಿಯಿಂದ ಅತಿಥಿಗಳನ್ನು ಸನ್ಮಾನಿಸಿ ಯೋಗ ಕ್ಷೇತ್ರಕ್ಕೆ ಅವರು ನೀಡುತ್ತಿ ರುವ ಸೇವೆಯನ್ನು ಗೌರವಿಸಲಾಯಿತು.

# ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ ಸಮಾರಂಭ

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,** ವೀರಶೈವ ವಿದ್ಯಾವರ್ಧಕ ಸಂಘದ ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ, ಪದವಿ ಪ್ರದಾನ ಸಮಾರಂಭ2026 ಶನಿವಾರ, 20ನೇ ಜೂನ್ 2026, ಸಮಯ: ಬೆಳಿಗ್ಗೆ11.00ಕ್ಕೆ ಆರ್.ವೈ.ಎಂ.ಇ.ಸಿ. ಸಭಾಂ ಗಣದಲ್ಲಿ ಜರುಗಿತು.

ಮುಖ್ಯ ಅತಿಥಿಗಳು ಮನೀಶ್ ಕುಮಾರ್ ಹಿರಿಯ ಉಪಾಧ್ಯಕ್ಷರು, ಮುಖ್ಯಸ್ಥರು - ಸಿ ಮತ್ತು ಇ ಎಸ್ ಜೆ.ಎಸ್.ಡಬ್ಲ್ಯು ಸ್ಟೀಲ್ ಲಿಮಿಟೆಡ್, ತೋರಣಗಲ್ಲು, ಬಳ್ಳಾರಿ, ವೀ.ವಿ.ಸಂಘ ಉಪಾಧ್ಯಕ್ಷರು ಹಾಗೂ ಆರ್.ವೈ.ಎಂ. ಇ.ಸಿ.ಅಧ್ಯಕ್ಷರು ಜಾನೇಕುಂಟೆ ಬಸವರಾಜ, ಸಹ ಕಾರ್ಯದರ್ಶಿಗಳು ಯಾಲ್ಪಿ ಮೇಟಿ ಪಂಪನಗೌಡ, ವೀ.ವಿ.ಸಂಘ ಕಾರ್ಯಕಾರಿ ಸಮಿತಿ ಸದಸ್ಯರು ಕೋರಿ ವಿರುಪಾಕ್ಷಪ್ಪ, ಪ್ರಾಂಶುಪಾಲರು ಡಾ. ಹೆಚ್.ಮಹಾಬಲೇಶ್ವರ, ಡೀನ್ ಪರೀಕ್ಷಾ ವಿಭಾಗ, ಸಂಚಾಲಕರು ಡಾ. ಬಿ. ಶ್ರೀಪತಿ, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಸಿಬ್ಬಂದಿ ಸದಸ್ಯರು ಪೋಷಕರು, ವಿದ್ಯಾರ್ಥಿ ಸಮುದಾಯ ಭಾಗವಹಿಸಿದ್ದರು.

ಆರಂಭದಲ್ಲಿ ಪ್ರಾಂಶುಪಾಲರಾದ



ಡಾ. ಹೆಚ್.ಮಹಾಬಲೇಶ್ವರ, ಎಲ್ಲ ಗಣ್ಯರನ್ನು ಸ್ವಾಗತಿಸಿದರು. ಡಾ. ಪ್ರಭಾವತಿ ವಿದ್ಯಾರ್ಥಿವೃಂದದವರಿಅದ ಪ್ರಮಾಣ ವಚನ ಮಾಡಿಸಿದರು.

ಮುಖ್ಯ ಅತಿಥಿಗಳಾಗಿ ಮನೀಶ್ ಕುಮಾರ್ ಮಾತನಾಡುತ್ತಾ ಇಂದು ನಿಮ್ಮ ಜೀವನದ ಮುಖ್ಯವಾದ ಮತ್ತು ಸ್ಮರಣೀಯವಾದ ದಿನ, ನೀವು ವಿದ್ಯಾರ್ಥಿ ಜೀವನ ದಿಂದ ಸವಾಲುಗಳಿಂದ ತುಂಬಿರುವ ನೈಜ ಪ್ರಪಂಚದ ಹೊಸ್ತಿಲಲ್ಲಿ ನಿಂತಿದ್ದೀರಿ, ನೀವು ತಾಂತ್ರಿಕ ಶಿಕ್ಷಣ ಆಯ್ದುಕೊಂಡಿದ್ದಕ್ಕೆ ಹೆಮ್ಮೆ ಪಡಬೇಕು. ಏಕೆಂದರೆ, ಕಳೆದ ದಶಕಗಳಿಂದ ತಾಂತ್ರಿಕತೆಯು ಅತೀ ವಿಸ್ಮಯವಾದ ಇನ್ನೋವೇಷನ್ಸ್‌ಗಳನ್ನು ಸಮಾಜಕ್ಕೆ ನೀಡಿದೆ. ವಿದ್ಯಾರ್ಥಿಗಳೇ ಜೀವನದಲ್ಲಿ ಹಣ ಎಷ್ಟು ಮುಖ್ಯವೋ ಅದರಂತೆ ಈ ನಾಲ್ಕು ಗುಣಗಳು ಅತಿಮುಖ್ಯ - ಬುದ್ಧಿವಂತಿಕೆ, ಕಲಿಯುವಿಕೆ, ಸುಸಂಸ್ಕೃತಿ, ಸಮಾಜದ ಜವಾಬ್ದಾರಿ. ನಮ್ಮ ಜೀವನವನ್ನು ಉನ್ನತ ಮಟ್ಟಕ್ಕೇರಿಸಿ ಸಂತೋಷ ಹಾಗು ಸುಖಕರವಾಗಿರಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ಬೇಕು ಇಂದಿನ ಆಧುನಿಕ ಉಪಕರಣಗಳಿಂದ ಅಂತರ್‌ಜಾಲದ ವಿಷಯಗಳು, ಕರೆಗಳು, ಮೆಸೇಜ್‌ಗಳು ಮೊದಲಾದ ಹಲವಾರು ವಿಷಯಗಳು ಅಲ್ಲದೇ ದೇಹದ ಆರೋಗ್ಯದ ಸ್ಥಿತಿ, ತಿಳಿದು ಕೊಳ್ಳಬಹುದಾಗಿದೆ ಇದು ಒಂದು ವಿಸ್ಮಯವಾದ ಉದಾಹರಣೆಗಳು ಮುಂದಿನ ದಶಕಗಳಲ್ಲಿ ತಾಂತ್ರಿಕತೆಯು ಶೀಘ್ರಗತಿಯಲ್ಲಿ ಸಮಾಜದಲ್ಲಿ ಹಲವಾರು ಮಾರ್ಪಾಟುಗಳನ್ನು ಮಾಡಲಿದೆ. ಇಂತಹ ಅವಿಷ್ಕಾರಗಳಲ್ಲಿ ನಿಮ್ಮ ಕೊಡುಗೆ ಇರಬೇಕು ಎಂದು ಕೋರಿದರು.

ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು ಹಾಗು ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಜಾನೇಕುಂಟೆ ಬಸವರಾಜ, ಇವರುಗಳು ಈ ಮಹಾನ್ ಸಂಸ್ಥೆಯಲ್ಲಿ ನಿಮ್ಮ ವಿದ್ಯಾರ್ಥಿಜೀವನವು ಒಂದು ಹಂತವಾದರೇ ಮುಂದಿನ ವೃತ್ತಿಪರಜೀವನದಲ್ಲಿ ಎರಡನೇಯ ಹಂತವಾಗಲಿದೆ, ಎಲ್ಲರಿಗೆ ಶುಭವಾಗಲಿ, ಅಲ್ಲದೇ ನಿಮ್ಮ ಕಿರಿಯರಿಗೆ ಮಾಗದರ್ಶಿಗಳಾಗಬೇಕು. ಯುವಇಂಜನೀಯರುಗಳಾದ ನೀವು ತಂತ್ರಜ್ಞಾನದಲ್ಲಿ ಆಳವಾದ ಜ್ಞಾನವನ್ನು, ಸಮಯ ಪ್ರಜ್ಞೆ ಹಾಗು ಸಂಹವಘನೆಶೀಲತೆ, ಹಾಗು ಸುಸಂಕೃತಿಯನ್ನು ಹೊಂದಿ, ಯಾವ ದೇಶದಲ್ಲಾದರೂ ಕೆಲಸಮಾಡುತ್ತಿದ್ದರೂ ನಮ್ಮ ದೇಶದ ಮೇಲೆ ಅಭಿಮಾನವನ್ನು ಕಡಿಮೆ ಮಾಡಿಕೊಳ್ಳಬಾರದೆಂದು ಸಲಹೆ ನೀಡಿದರು.

# ಸುಃಖ ಮತ್ತು ದುಃಖಗಳಿಂದ ಬದಲಾವಣೆಗೆ ಪ್ರೇರಣೆ : ಶಿವಶಾಂತವೀರ ಶರಣರು

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,**ಜೀವನದಲ್ಲಿ ಎದುರಾಗುವ ಸುಃಖ ಮತ್ತು ದುಃಖಗಳು ನಮ್ಮಲ್ಲಿ ಬದಲಾವಣೆಗೆ ಕಾರಣ ಆಗಲಿವೆ ಎಂದು ಪರಮ ಪೂಜ್ಯ ಶಿವ ಶಾಂತವೀರ ಶರಣರು ಆಶೀರ್ವದಿಸಿದ್ದಾರೆ.

ಬಸವಭವನದಲ್ಲಿ ಭಾನುವಾರ ನಡೆದ ಚಿಕೇನಕೊಪ್ಪದ ಶ್ರೀ ಚನ್ನವೀರ್ಥ ಶರಣರ 31ನೇ ಪುಣ್ಯಸ್ಮರಣೋತ್ಸವ ಹಾಗೂ 1008 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ಶ್ರೀ ಶಿವಶಾಂತವೀರ ಶರಣರ ತುಲಾಭಾರದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ನದಿಯ ನೀರು ಸಾಗಲು ಬಲ ದಂಡೆ ಮತ್ತು ಎಡ ದಂಡೆ ಬೇಕು. ಅದೇ ರೀತಿಯಲ್ಲಿ ನಮ್ಮೆಲ್ಲರ ಬದುಕಿನ ನದಿ ಸಾಗಬೇಕು ಎಂದಲ್ಲಿ ಸುಃಖ ಮತ್ತು ದುಃಖದ ದಂಡೆಗಳು ಅವಶ್ಯ. ಸುಃಖ ಮತ್ತು ದುಃಖದ ದಂಡೆಗಳ ಮಧ್ಯೆ ನಮ್ಮೆಲ್ಲರ ಜೀವನ ನೀರಿನಂತೆ ಸಾಗಿದಾಗಲೇ ಬದುಕು ಸಾಗುತ್ತಿದೆ ಎಂದರ್ಥ ಎಂದರು.

ಭೌತಿಕ ವಸ್ತುಗಳು ನಾನಾ ರೀತಿಯಲ್ಲಿ ಬದಲಾಗುತ್ತವೆ. ಭೌತಿಕ ವಿಷಯಗಳು ರೂಪಾಂತರಗೊಳ್ಳುತ್ತವೆ. ಭೌತಿಕ ವಸ್ತುಗಳು ಮತ್ತು ವಿಷಯಗಳನ್ನು ತಿರಸ್ಕರಿಸಿದ್ದ ಚನ್ನವೀರ ಶರಣರು, ನಮ್ಮೆಲ್ಲರ ನಡುವಿನ ಆರಾಧ್ಯದೈವ ಆಗಿದ್ದಾರೆ. ಚನ್ನವೀರ ಶರಣರ ರೀತಿಯಲ್ಲಿ ಪ್ರತಿಯೊಬ್ಬರೂ ಜೀವನದಲ್ಲಿ ಬದುಕಿನ ಮೌಲ್ಯವರ್ಧನೆ ಮಾಡಿಕೊಳ್ಳಬೇಕು ಎಂದರು.



ನಮ್ಮೆಲ್ಲರಲ್ಲೂ ಅದ್ಭುತವಾದ ಶಕ್ತಿಯನ್ನು - ಸಾಮರ್ಥ್ಯವನ್ನು ಸೃಷ್ಟಿಯು ಕೊಟ್ಟಿದೆ. ನಮ್ಮಲ್ಲಿರುವ ಶಕ್ತಿ ಮತ್ತು ಸಾಮರ್ಥ್ಯವನ್ನು ಸದ್ವಿನಿಯೋಗ ಮಾಡಿ ಕೊಂಡು ಬಡವರಿಗಾಗಿ, ಸಮಾಜಕ್ಕಾಗಿ, ಸಮೀಪದವರ ಒಳಿತಿಗಾಗಿ ಮತ್ತು ಅಗತ್ಯ ಇರುವವರ ನೆರವಿಗಾಗಿ ಸ್ಪಂದಿಸುತ್ತಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದರು.

ಆಕಾಶ, ವಾಯು, ಅಗ್ನಿ, ನೀರು ಮತ್ತು ಭೂಮಿಯನ್ನು ದೇವರು ನಮಗೆಲ್ಲರಿಗೂ ನೀಡಿದ್ದಾನೆ. ನಮಗೆಲ್ಲರಿಗೂ ನವರಂಧ್ರಗಳನ್ನು ನಿರ್ಮಾಣ ಮಾಡಿದ್ದಾನೆ. ಈ ನವರಂಧ್ರಗಳಲ್ಲಿ ಒಂದು ಕ್ಷಣಹೊತ್ತು ಯಾವುದಾದರೂ ಒಂದನ್ನು ದೇವರು ಕ್ಷಣಮಾತ್ರ ನಿಲ್ಲಿಸಿದರೆ ಬದುಕಲು ಸಾಧ್ಯವಿಲ್ಲ ಎಂದರು.

ಬಳೂಟಗಿಯ ಸಿದ್ದೇಶ್ವರ ಶಾಸ್ತ್ರಿಗಳು, ಚನ್ನವೀರ ಶರಣರು ಮತ್ತು ಅಲ್ಲೀಪುರದ ಮಹಾದೇವ ತಾತನವರು ಸಮಕಾಲೀನರು. ಜಾತ್ಯಾತೀತರಾಗಿದ್ದ ಚನ್ನವೀರ ಶರಣರು ಸಮಾಜಮುಖಿ ಚಿಂತನೆಗಳ ಮೂಲಕ ನಮ್ಮೆಲ್ಲರ ನಡುವೆ ಚೈತನ್ಯವಂತರಾಗಿ ಈಗಲೂ ಇದ್ದಾರೆ. ಮೌನ, ಕಾಲ್ನಡಿಗೆ, ತಪಸ್ಸುಗಳ ಮೂಲಕ ಭಕ್ತರ ಮನಸ್ಸಲ್ಲಿ ಅಚ್ಚಳಿಯದೇ ಇರುವ ಚನ್ನವೀರ ಶರಣರು, ಮಾಡಿದ ಪವಾಡಗಳು, ತೋರಿದ ವಿಸ್ಮಯಗಳು ಸ್ಮರಣೀಯ ಎಂದರು.

ಸಿದ್ದಾಪುರ ಶಿವಲಿಂಗ ಶಾಸ್ತ್ರಿಗಳು, ಚನ್ನವೀರ ಶರಣರ ಪವಾಡಗಳು ಮತ್ತು ಧಾರ್ಮಿಕ ಶಕ್ತಿ, ಆಧ್ಯಾತ್ಮಿಕ ಚೈತನ್ಯಗಳ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತ ಕೋರಿದರು. ವಂದಲಿಯ ಪಂಡಿತ ವಿರೂಪಾಕ್ಷಯ್ಯ ಗವಾಯಿಗಳು ಸಂಗೀತ ಸೇವೆ ಸಲ್ಲಿಸಿದರು. ಕೊಪ್ಪಳ ಗವಿಮಠದ ಸಂಗೀತ ಶಿಕ್ಷಕರಾಗಿರುವ ವೀರೇಶ್ ಹಿಟ್ನಾಳ್ ಅವರು ಹಾರ್ಮೋನಿ ಯಂ ಸಾಥ್ ನೀಡಿದರು. ಗಂಗಾವತಿಯ ರಾಘವೇಂದ್ರ ಅವರು ತಬಲಾ ಸಾಥ್ ನೀಡಿದರು.

ಬಸವರಾಜ್ ಅಮಾತಿ ಅವರು ಕಾರ್ಯಕ್ರಮ ನಿರೂಪಿಸಿದರು. ಹದಿಮೂರು ಭಕ್ತಾದಿಗಳು ಮತ್ತು ಅವರ ಕುಟುಂಬದ ಸದಸ್ಯರು ತುಲಾಭಾರ ಸೇವೆಯನ್ನು ಸಲ್ಲಿಸಿದರು.

# ಹಿಂದುಳಿದ ವಿದ್ಯಾರ್ಥಿಗಳಿಗೆ ಅಂಕ ಮುಖ್ಯವಲ್ಲ, ಮುಖ್ಯವಾಹಿನಿಗೆ ತರಬೇಕಿದೆ -ಸಾಹಿತಿ ಸೊಪ್ಪಿಮಠ

ಕನ್ನಡ ಮಾತೃ ಭೂಮಿ ವಾರ್ತೆ

**ಕುಕನೂರು,** ಕಲಿಕೆಯಲ್ಲಿ ಹಿಂದುಳಿದ ವಿದ್ಯಾ ರ್ಥಿಗಳನ್ನು ಗುರುತಿಸಿ ಮೇಲೆತ್ತುವ ಕಾರ್ಯ ಮಾಡಬೇಕಾಗಿದ್ದು ಅಗತ್ಯವಾ ಗಿದೆ ಎಂದು ಮಂಡಲಗಿರಿ ಜಗದ್ಗುರು ತೋಂಟದಾರ್ಯ ಐಟಿಐ ಕಾಲೇಜಿನ ಉಪನ್ಯಾಸಕ ಹಾಗೂ ಸಾಹಿತಿ ಭೋಜ ರಾಜ್ ಸೊಪ್ಪಿಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಶನಿವಾರ ಸಂಜೆ ಸ್ಥಳೀಯ ಎಂ.ಎಸ್. ಚಾರಿಟೇಬಲ್ ಟ್ರಸ್ಟ್ ,ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ದಿ ಟ್ರಸ್ಟ್ (ರಿ) ಮತ್ತು ಕಾವ್ಯಶ್ರೀ ಕಲಾ ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ( ರಿ) ಕುಕನೂರು ಇವರ ಸಹ ಯೋಗದಲ್ಲಿ 215 ನೆಯ ಶಿವಾನುಭವ ನಿಮಿತ್ಯ ಸಂಜೆ ನಡೆದ ಅನುಭವ ಮಾಲಿಕೆ -1 ರಲ್ಲಿ ಜಾಣರನ್ನು ಜಾಣರನ್ನಾಗಿ ಮಾಡುವ ಶಾಲೆಗಳು ಬೇಕೋ , ಅಥವಾ ದಡ್ಡರನ್ನು ಜಾಣ ರನ್ನಾಗಿ ಮಾಡುವ ಶಾಲೆಗಳು ಬೇಕೋ ಎನ್ನುವ ಕುರಿತು ಉಪನ್ಯಾಸ ಮಾಡಿದರು.

ಇಂದಿನ ದಿನಗಳಲ್ಲಿ ಸರಕಾರಗಳ ದ್ವಂದ್ವ ನಿಲುವುಗಳು ಸಹ ಶೈಕ್ಷಣಿಕ ಪ್ರಗತಿಯಲ್ಲಿ ಹಿನ್ನೆಡೆಯಾಗುತ್ತದೆ ಜಾಣ ವಿದ್ಯಾರ್ಥಿಗಳ ಜೊತೆ ಪೈಪೋಟಿ ಮಾಡಲು ಸರ್ಕಾರ ಕೇವಲ 13 ಅಂಕ ಪಡೆದರೂ ಸಾಕು ತೇರ್ಗಡೆ ಯಾಗುತ್ತೇವೆ ಎಂಬ ಕೃತಕ ಸಮಾಧಾನ ಪಡುವಂಥ ಸಂದರ್ಭ ಒದಗಿ ಬಂದಿದೆ ಎಂದು ಖೇದ ವ್ಯಕ್ತಪಡಿಸಿದರು. ಜಾಣರನ್ನು ಕೇವಲ ಜಾಣರನ್ನಾಗಿಸುವ ಜೊತೆಗೆ ಉಳಿದವರಿಗೂ ವಿವಿಧ ಕೌಶಲ್ಯಗಳ ತರಬೇತಿ ನೀಡಿ ಮುಖ್ಯವಾಹಿನಿಗೆ ತರುವ ಕೆಲಸಗಳು ಆಗಬೇಕಿದೆ, ಇಂಥ ಜಾಗೃತಿ ಮೂಡಿಸುವ ಕೆಲಸ 10 ವರುಷಗಳ ಹಿಂದೆಯೆ ನಡೆಯಬೇಕಿತ್ತು ಇಂದು ಪರೀಕ್ಷಾ ಸುಧಾರಣೆಗೆ ಸಾಮಾಜಿಕ ಜಾಲ ತಾಣಗಳಲ್ಲಿ ಉಪಯುಕ್ತ ಮಾಹಿತಿ ಸಿಗುತ್ತವೆ ಶಿಕ್ಷಕರು ಶಿಕ್ಷಣ ಸಂಸ್ಥೆಗಳು ಪ್ರಾಮಾಣಿಕತೆಯಿಂದ ಯಾವುದೇ ಮಗುವಿಗೆ ಹಿನ್ನಡೆಯಾಗದಂತೆ ಮೇಲೆತ್ತುವ ಕಾರ್ಯ ಮಾಡಬೇಕಾಗಿದ್ದು ಅಗತ್ಯವಾಗಿದೆ ಎಂದು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪ್ರೌಢಶಾಲೆಯ ಮುಖ್ಯೊಪಾಧ್ಯಾಯ ಎಚ್, ಮುತ್ತಣ್ಣ ಅವರು ಮಾತನಾಡಿ ಶಿಕ್ಷಣ ಕ್ಷೇತ್ರದಲ್ಲಿ ದಡ್ಡ ಶಾಲೆ ಜಾಣ ಶಾಲೆ ಅನ್ನುವುದು ಬೇಡ ಅದಕ್ಕಿಂತ ಮುಖ್ಯವಾಗಿ ಯಾವ ಮಗುವೂ ಹುಟ್ಟಿನಿಂದ ದಡ್ಡ ನಾಗಿರುವುದಿಲ್ಲ, ಮಕ್ಕಳು ದೈವದತ್ತ ಕೊಡುಗೆಯಾಗಿದ್ದು ಅವುಗಳಿಗೆ ನಿರಂತರ ಕಲಿಕ ಮೂಲಕ ಹೊಸತನ್ನು ಮೂಡಿಸಬಹುದು, ಕಲಿಕೆಯಲ್ಲಿ ಹಿಂದೆ ಅನೇಕ ವಿದ್ಯಾರ್ಥಿಗಳು ಕ್ರಮೇಣ ಅವರ ವಯೋಗುಣವಾಗಿ ಅದ್ಬುತ ಸಾಧನೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ ಕೈಗಾರಿಕೆ, ಚಲನಚಿತ್ರ, ವಾಣಿಜ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದಾರೆ, ಇಂಥ ಮಕ್ಕಳ ಪ್ರಗತಿಗೆ ಎಲ್ಲಾ ವಿಷಯಗಳ ಶಿಕ್ಷಕರಿಗಿಂತ ಕನ್ನಡ ಭೋಧಕರ ಮಾರ್ಗದರ್ಶನ ಮತ್ತು ಶ್ರಮ ಅಪಾರವಾದುದು ,ಅವರು ಕನ್ನಡ ಓದು ಬರಹ, ಗ್ರಂಥಾಲಯ ಮಹತ್ವ, ಹಾಡು ಸಂಗೀತ , ರಂಗಕಲೆ ಇತ್ಯಾದಿ ವಿಷಯಗಳ ಮೂಲಕ ವಿದ್ಯಾರ್ಥಿಗಳ ಬೆಳವಣಿಗೆಗೆ ಉತ್ತೇಜನ ಕೊಡುವುದನ್ನು ಮರೆಯಬಾರದು ಎಂದು ತಿಳಿಸಿದ ಅವರು ,ಇಂಥ ಮಕ್ಕಳ ಪ್ರಗತಿಗೆ ಪೂರಕ ವಾಗುವ ಕಾರ್ಯಕ್ರಮ ಹೆಚ್ಚಾಗಿ ನಡೆಯಲಿ ಎಂದು ಹೇಳಿದರು.

ಪರಮ ಪೂಜ್ಯ ಡಾ.ಮಹಾದೇವ ಮಹಾ ಸ್ವಾಮಿಗಳು ಶ್ರೀ ಅನ್ನದಾನೀಶ್ವರ ಶಾಖಾ ಮಠ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಕನ್ನಡ ಭಾಷಾ ಭೋಧಕರಾದ ಬಸವರಾಜ್ ಉಪ್ಪಿನ, ರೇಣುಕಾ ಪಾಟೀಲ, ಅಕ್ಕಮಹಾದೇವಿ, ಗೀತಾ ಕೆಲೂರು, ಪ್ರೇಮಾ ಪಾಟೀಲ್ ವಸಂತ ಗುಡಿ ಇತರರನ್ನು ಸತ್ಕರಿಸಲಾಯಿತು. ಕನ್ನಡ ಟ್ರಸ್ಟಿನ ಅಧ್ಯಕ್ಷ ರುದ್ರಪ್ಪ ಭಂಡಾರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು,ಕಾವ್ಯಶ್ರೀ ಕಲಾ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಬಸವರಾಜ್ ಕೊಡ್ಲಿ ಸ್ವಾಗತಿಸಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶ್ರೀಮಠದ ಆಡಳಿತಾಧಿಕಾರಿ ಸಂಗಮೇಶ್ ಕಲ್ಮಠ, ವಕೀಲರಾದ ಬಸವರಾಜ್ ಜಂಗ್ಲಿ, ರಮೇಶ್ ಗಜಾಕೋಶ, ಅಡಿವೆಪ್ಪ ಬೋರನ್ನವರ, ನಿವೃತ್ತ ಪ್ರಾಚಾರ್ಯ ಹನುಮಪ್ಪ ದೇವರಮನಿ, ಕನಕರಾಯ ಭಜಂತ್ರಿ, ರವಿ ಹಳ್ಳಿಕೇರಿ, ಸಾಹಿತಿ ರವಿ ಹಿರೇಮನಿ, ರಾಜೂರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೈದ್ರಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮಳೆಯ ನಿರೀಕ್ಷೆಯಲ್ಲಿ ಕಕ್ಕೇರಾ ರೈತರು; ಬಿತ್ತಿದ ಬೆಳೆಗಳು ಬಾಡುವ ಆತಂಕ

ಕನ್ನಡ ಮಾತೃ ಭೂಮಿ ವಾರ್ತೆ

**ಕಕ್ಕೇರಾ,** ನಿರೀಕ್ಷಿತ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಕಕ್ಕೇರಾ ಹೋಬಳಿ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಗಳು ಮಂದಗತಿಯಲ್ಲಿ ಸಾಗುತ್ತಿದ್ದು, ರೈತರು ಮಳೆಗಾಗಿ ಆಕಾಶದತ್ತ ಮುಖ ಮಾಡುವಂತಾಗಿದೆ.

ಆರಂಭದಲ್ಲಿ ಉತ್ತಮ ಮಳೆಯಾಗಿದ್ದರಿಂದ ಉತ್ಸಾಹದಿಂದ ಬಿತ್ತನೆ ಆರಂಭಿಸಿದ್ದ ರೈತರು ಈಗ ಮಳೆ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಉತ್ತಮ ಮಳೆಯಾಗಿದ್ದರಿಂದ ಈ ಬಾರಿಯೂ ಉತ್ತಮ ಮುಂಗಾರು ಸಿಗಲಿದೆ ಎಂಬ ಭರವಸೆಯಲ್ಲಿದ್ದ ರೈತರು ಭೂಮಿಯನ್ನು ಹದಗೊಳಿಸಿ ಬಿತ್ತನೆಗೆ ಸಜ್ಜುಗೊಂಡಿದ್ದರು. ಹತ್ತಿ, ತೊಗರಿ, ಸಜ್ಜೆ, ಜೋಳ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ಪೂರ್ಣಗೊಳಿಸಿದ ಅನ್ನದಾತರು ಇದೀಗ ಮಳೆಯ ನಿರೀಕ್ಷೆಯಲ್ಲಿ ದಿನ ಕಳೆಯುತ್ತಿದ್ದಾರೆ.

ಕಕ್ಕೇರಾ ಹೋಬಳಿ ವ್ಯಾಪ್ತಿಯಲ್ಲಿ ಕಳೆದ ಕೆಲ ದಿನಗಳಿಂದ ನಿಚ್ಚಳ ಆಕಾಶ ಮತ್ತು ರಣಬಿಸಿಲು ಮುಂದುವರಿದಿದ್ದು, ಮಳೆ ಬೀಳುವ ನಿರೀಕ್ಷೆ ಕ್ಷೀಣಿಸಿದೆ.



ಆರಂಭಿಕ ಮಳೆಗೆ ಬಿತ್ತನೆ ಮಾಡಿದ ಹತ್ತಿ, ತೊಗರಿ ಮತ್ತು ಸಜ್ಜೆ ಬೆಳೆಗಳು ಮೊಳಕೆ ಹೊಡೆದಿದ್ದರೂ, ವಾರಕ್ಕೂ ಹೆಚ್ಚು ದಿನಗಳಿಂದ ಮಳೆ ಸುರಿಯದ ಕಾರಣ ಅವು ಬಾಡುವ ಸ್ಥಿತಿಗೆ ತಲುಪಿವೆ.

ಇನ್ನೂ ಮೂರ್ನಾಲ್ಕು ದಿನಗಳಲ್ಲಿ ಮಳೆಯಾಗದಿದ್ದರೆ ಬಿತ್ತನೆ ಬೀಜ, ಕಾರ್ಮಿಕರ ಕೂಲಿ ಹಾಗೂ ಕೃಷಿ ಸಿದ್ಧತೆಗೆ ಖರ್ಚು ಮಾಡಿದ ಹಣವೆಲ್ಲ ಮಣ್ಣು ಪಾಲಾಗುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ರೈತ ಗೊಜಗಾರ ರಾಯಪ್ಪ ಆತಂಕ ವ್ಯಕ್ತಪಡಿಸಿದರು. ರಸಗೊಬ್ಬರ ಕೊರತೆಯೂ ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದ್ದು, ಒಂದು ಎಕರೆಗೆ ಕೇವಲ ಒಂದೇ ಚೀಲ ರಸಗೊಬ್ಬರ ವಿತರಿಸಲಾಗಿದೆ ಎಂದು ಅವರು ದೂರಿದರು.

ಹಲವಾರು ರೈತರು ಒಂದು ಎಕರೆ ಹತ್ತಿ ಬೆಳೆ ಬಿತ್ತನೆಗೆ 25 ಸಾವಿರದಿಂದ 30 ಸಾವಿರದವರೆಗೆ ಹೂಡಿಕೆ ಮಾಡಿದ್ದಾರೆ. ಮೊಳಕೆ ಬಂದಿರುವ ಬೆಳೆಗಳು ಈಗ ಮಳೆಯನ್ನೇ ಅವಲಂಬಿಸಿವೆ. ಮಳೆ ಬಾರದೆ ಹೋದರೆ ಸಂಪೂರ್ಣ ಬೆಳೆ ನಷ್ಟವಾಗುವ ಸಾಧ್ಯತೆ ಇದೆ ಎಂದು ರೈತ ಪರಮಣ್ಣ ಜಂಪಾ ಅಲವತ್ತುಕೊಂಡರು.

ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಕಕ್ಕೇರಾ ಹೋಬಳಿ ವ್ಯಾಪ್ತಿಯಲ್ಲಿ ಒಟ್ಟು 28,180 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆ ಗುರಿ ನಿಗದಿಪಡಿಸಲಾಗಿದೆ. ಇದರಲ್ಲಿ 15,980 ಹೆಕ್ಟೇರ್ ಭತ್ತ, 7,350 ಹೆಕ್ಟೇರ್ ಹತ್ತಿ, 2,650 ಹೆಕ್ಟೇರ್ ತೊಗರಿ ಹಾಗೂ 2,200 ಹೆಕ್ಟೇರ್ ಸಜ್ಜೆ ಬಿತ್ತನೆ ಮಾಡುವ ಗುರಿ ಹೊಂದಲಾಗಿದೆ ಎಂದು ಕೃಷಿ ತಾಂತ್ರಿಕ ಅಧಿಕಾರಿ ಚನ್ನಬಸವನಾಯಕ ತಿಳಿಸಿದ್ದಾರೆ.

ರೈತ ಸಂಪರ್ಕ ಕೇಂದ್ರದಲ್ಲಿ ಸಹಾಯಧನದಡಿ ರೈತರಿಗೆ ವಿತರಿಸಲು 55.40 ಕ್ವಿಂಟಲ್ ತೊಗರಿ ಬೀಜ ಹಾಗೂ 3 ಕ್ವಿಂಟಲ್ ಹೆಸರು ಬೀಜ ದಾಸ್ತಾನು ಇದೆ ಎಂದು ಕೃಷಿ ಅಧಿಕಾರಿ ಎಸ್. ಶ್ರೀಧರ್ ಮಾಹಿತಿ ನೀಡಿದ್ದಾರೆ.

ಮುಂಗಾರು ಆರಂಭದಲ್ಲೇ ಮಳೆ ಕೈಕೊಟ್ಟಿರುವುದರಿಂದ ಕಕ್ಕೇರಾ ಭಾಗದ ರೈತರಲ್ಲಿ ಆತಂಕ ಮನೆ ಮಾಡಿದ್ದು, ಮುಂದಿನ ಕೆಲ ದಿನಗಳಲ್ಲಿ ಉತ್ತಮ ಮಳೆಯಾಗಬೇಕೆಂಬುದು ರೈತ ಸಮುದಾಯದ ಒಕ್ಕೊರಲಿನ ಆಶೆಯಾಗಿದೆ.

# ಕನಕಗಿರಿ : ಅಂತರರಾಷ್ಟ್ರೀಯ ಯೋಗ ದಿನಾಚರಣೆ : ಮಕ್ಕಳಿಗೆ ಯೋಗ ಮಹತ್ವದ ಅರಿವು

ಕನ್ನಡ ಮಾತೃ ಭೂಮಿ ವಾರ್ತೆ

**ಕನಕಗಿರಿ,**ಪಟ್ಟಣದ ಶ್ರೀ ವೆಂಕಟೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಸಡಗರ ಹಾಗೂ ಅರ್ಥಪೂರ್ಣವಾಗಿ ಆಚರಿಸ ಲಾಯಿತು.

ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ವಿಶೇಷ ಕಾರ್ಯಕ್ರಮದಲ್ಲಿ ಎಲ್.ಕೆ.ಜಿಯಿಂದ ಹಿಡಿದು 7ನೇ ತರಗತಿಯವರೆಗಿನ ಮುದ್ದು ವಿದ್ಯಾರ್ಥಿ, ವಿದ್ಯಾರ್ಥಿ ನಿಯರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ವಿವಿಧ



ಯೋಗಾಸನಗಳನ್ನು ಪ್ರದರ್ಶಿಸಿದರು.

**ಯೋಗಾಸನದ ಮಹತ್ವದ ಅರಿವು :** ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸುವುದರ ಜೊತೆಗೆ, ದೈನಂದಿನ ಜೀವನದಲ್ಲಿ ಯೋಗದ ಮಹತ್ವದ ಬಗ್ಗೆ ಮಕ್ಕಳಿಗೆ ಸವಿಸ್ತಾರವಾಗಿ ಮನವರಿಕೆ ಮಾಡಿಕೊಡಲಾಯಿತು.

ಇದೆ ಸಂದರ್ಭದಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಶಾಲೆಯ ಮುಖ್ಯ ಗುರುಗಳಾದ ನಾಗೇಶ್ ಮಾಟೂರ ಆರೋಗ್ಯವೇ ಭಾಗ್ಯ. ಬಾಲ್ಯದಿಂದಲೇ ಯೋಗವನ್ನು ಜೀವನದ ಭಾಗವಾಗಿಸಿಕೊಳ್ಳುವುದರಿಂದ ಸದೃಢ ಹಾಗೂ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ. ಎಂದು ಹೇಳುವ ಮೂಲಕ, ಯೋಗವು ಕೇವಲ ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲದೆ, ಮಕ್ಕಳ ಮಾನಸಿಕ ವಿಕಾಸ ಹಾಗೂ ಏಕಾಗ್ರತೆ ಹೆಚ್ಚಿಸಲು ಸಹಕಾರಿ ಎಂಬ ಅರಿವನ್ನು ಈ ಕಾರ್ಯಕ್ರಮದ ಮೂಲಕ ಮೂಡಿಸಲಾಯಿತು. ಎಂದು ಹೇಳಿದರು.

ಈ ಯೋಗ ಜಾಗೃತಿ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳಾದ ನಾಗೇಶ್ ಮಾಟೂರ್,

ಪ್ರಮುಖರಾದ ವೆಂಕಟೇಶ್ ರೆಡ್ಡಿ, ಪ್ರಿಯಾಂಕ ರೆಡ್ಡಿ, ವಿಜಯಲಕ್ಷ್ಮಿ, ರೇಖಾ ಹಾಗೂ ಶರಣಪ್ಪ ಸೇರಿದಂತೆ ಶಾಲೆಯ ಇತರ ಉಪನ್ಯಾ ಸಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

# ಆಹಾರ ಇಲಾಖೆಯಿಂದ ರೈತರ ಖಾತೆಗೆ ಜೋಳ ಖರೀದಿ ಹಣ ಜಮೆ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,**ರಾಯಚೂರಿನ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ವತಿಯಿಂದ 2025-26ನೇ ಸಾಲಿನ ಕನಿಷ್ಠ ಬೆಂಬಲ ಯೋಜನೆಯಡಿ ಜೋಳವನ್ನು ಸರಬರಾಜು ಮಾಡಿದ ರೈತರ ಖಾತೆಗೆ ಹಣವನ್ನು ಜಮೆ ಮಾಡಲಾಗುತ್ತಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಯಚೂರು ಜಿಲ್ಲೆಯಾದ್ಯಂತ ಒಟ್ಟು 36 ಜೋಳ ಖರೀದಿ ಕೇಂದ್ರಗಳ ಮೂಲಕ ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ಜೋಳ ಬೆಳೆದ ರೈತರಿಂದ ಈಗಾಗಲೇ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ ಮುಂಗಾರು ಋತುವಿನಲ್ಲಿ 15,818 ರೈತರಿಂದ 8,41,627.50 ಕ್ವಿಂಟಾಲ್ ಮತ್ತು ಹಿಂಗಾರು ಋತುವಿನಲ್ಲಿ 7291 ರೈತರಿಂದ 4,23,976.50 ಕ್ವಿಂಟಾಲ್ ಜೋಳ ಖರೀದಿ ಮಾಡಲಾಗಿದ್ದು, ಮುಂಗಾರು ಹಂಗಾಮಿನಲ್ಲಿ ಜೋಳ ಸರಬರಾಜು ಮಾಡಿದ ಒಟ್ಟು 15,818 ರೈತರ ಪೈಕಿ ಇದುವರೆಗೂ 9,372 ರೈತರ ಖಾತೆಗೆ ಈಗಾಗಲೇ ಡಿಬಿಟಿ ಮೂಲಕ 185 ಕೋಟಿ ಹಣವನ್ನು ಪಾವತಿಸಲಾಗಿದೆ.

ಇನ್ನೂಳಿದ 13,737 ರೈತರ ಖಾತೆಗೆ ಶೀಘ್ರದಲ್ಲಿಯೇ ಹಣವನ್ನು ಪಾವತಿಸಲಾಗುವುದೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಹಾಗೂ ಜಿಲ್ಲಾ ಟಾಸ್ಕಾಫೋರ್ಸ್ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಲಿಯಾಬಾದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,**ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ ವ್ಯಾಪ್ತಿಗೆ ಬರುವ 110/11 ಕೆವಿ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಜೂನ್ 23ರ ಬೆಳಿಗ್ಗೆ 10ಗಂಟೆಯಿಂದ ಸಂಜೆ 5ರವರಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ್ಯಾಯಾಧೀಶರಿಗೆ ಮಧ್ಯಸ್ಥಿಕೆ ಕುರಿತು ಒಂದು ದಿನದ ಪುನಶ್ಚೇತನ ತರಬೇತಿ

# ವಿವಾದಗಳ ಇತ್ಯರ್ಥಕ್ಕೆ ಮಧ್ಯಸ್ಥಿಕೆ ಕಾನೂನುಬದ್ಧವಾಗಿದೆ - ನ್ಯಾ. ಆರ್.ನಟರಾಜ್

ಕನ್ನಡ ಮಾತೃ ಭೂಮಿ ವಾರ್ತೆ






**ಬಳ್ಳಾರಿ,**ಮಧ್ಯಸ್ಥಿಕೆಯನ್ನು ಕಾನೂನುಬದ್ಧಗೊಳಿಸಲಾಗಿದೆ. ವಿವಾದದಲ್ಲಿರುವ ಕಕ್ಷಿದಾರರ ನಡುವೆ ಸಂಧಾನ ಮೂಡಿಸುವಲ್ಲಿ ನ್ಯಾಯಾಧೀಶರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಯಾವ ಪ್ರಕರಣಗಳನ್ನು ಮಧ್ಯಸ್ಥಿಕೆಗೆ ಕಳುಹಿಸಬೇಕು ಎಂಬುದನ್ನು ನ್ಯಾಯಾಧೀಶರೇ ನಿರ್ಧರಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರು ಹಾಗೂ ಬಳ್ಳಾರಿ ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶರಾದ ನ್ಯಾಯಮೂರ್ತಿ ಆರ್.ನಟರಾಜ್ ಅವರು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ ಹಾಗೂ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಜಂಟಿ ಆಶ್ರಯದಲ್ಲಿ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ನ್ಯಾಯಾಧೀಶರು ಹಾಗೂ ರೆಫರಲ್ ಜಡ್ಜ್‌ಗಳಿಗೆ ಮಧ್ಯಸ್ಥಿಕೆ ಕುರಿತು ಬಳ್ಳಾರಿಯ ತಾಳೂರು ರಸ್ತೆಯಲ್ಲಿರುವ ಜಿಲ್ಲಾ ನ್ಯಾಯಾಲಯದ ಸಂಕೀರ್ಣದ 1 ನೇ ಮಹಡಿಯ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಒಂದು ದಿನದ ಪುನಶ್ಚೇತನ ತರಬೇತಿ ಕಾರ್ಯಾಗಾರವನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಮಧ್ಯಸ್ಥಿಕೆ ಅಥವಾ ಸಂಧಾನ ಎಂಬುದು ಹೊಸದೇನಲ್ಲ, ಮೊದಲಿನಿಂದಲೂ ವಿವಾದಗಳನ್ನು ಸಂಧಾನದ ಮೂಲಕವೇ ಬಗೆಹರಿಸಿಕೊಳ್ಳುವ ಸಂಪ್ರದಾಯವನ್ನು ಭಾರತವು ಹೊಂದಿದೆ. ಕುಟುಂಬದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿಂದ ಹಿಡಿದು ಹಳ್ಳಿಯ ಪಂಚಾಯಿತಿಗಳವರೆಗೆ ನಮ್ಮ ದೈನಂದಿನ ಜೀವನದಲ್ಲಿ ಪೋಷಕರು ಮತ್ತು ಹಿರಿಯರು ಮಧ್ಯಸ್ಥಿಕೆ ವಹಿಸುತ್ತಾ ಬಂದಿದ್ದಾರೆ.

ಇಂದು ನಾವು ಸಾಂಸ್ಥಿಕ ನ್ಯಾಯದಾನದ ವ್ಯವಸ್ಥೆಗೆ ಬದಲಾಗಿದ್ದರೂ, ನಮ್ಮ ಇತಿಹಾಸ ಮತ್ತು ಪುರಾಣಗಳಲ್ಲಿ ಮಧ್ಯಸ್ಥಿಕೆಗೆ ಅಗ್ರಸ್ಥಾನವಿದೆ ಎಂದರು.

ಮಧ್ಯಸ್ಥಿಕೆಯು ಕೇವಲ ಪ್ರಕರಣಗಳನ್ನು ಇತ್ಯರ್ಥಪಡಿಸುವುದಿಲ್ಲ, ಬದಲಿಗೆ ಕರಗಿಹೋದ ಸಂಬಂಧಗಳನ್ನು ಬೆಸೆಯುತ್ತದೆ. ಉಭಯ ಪಕ್ಷಗಳ ನಡುವಿನ ದ್ವೇಷವನ್ನು ತಣಿಸಿ, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯಿಂದ ಬದುಕಲು ದಾರಿ ಮಾಡಿಕೊಡುತ್ತದೆ ಎಂದು ಆಶಿಸುತ್ತಾ ತರಬೇತಿ ಶಿಬಿರಕ್ಕೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ನ್ಯಾಯಾಧೀಶರು ಅಂತರಾಷ್ಟ್ರೀಯ ಯೋಗ ದಿನ ಹಾಗೂ ವಿಶ್ವ ತಂದೆಯಅದಿರ ದಿನದ ಶುಭಾಶಯ ತಿಳಿಸಿದರು.

ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶರಾದ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರು ವರ್ಚುವಲ್ ಮೂಲಕ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ನ್ಯಾಯಾಲಯಗಳ ಮೇಲಿರುವ ಅಗಾಧವಾದ ಕೆಲಸದ ಹೊರೆಯನ್ನು ಕಡಿಮೆ ಮಾಡಲು ಮತ್ತು ಕಕ್ಷಿದಾರರ ನಡುವಿನ ಬಾಂಧವ್ಯವನ್ನು ಉಳಿಸಲು ಪರ್ಯಾಯ ವಿವಾದ ಬಗೆಹರಿಕೆ ವ್ಯವಸ್ಥೆ, ಅದರಲ್ಲೂ ವಿಶೇಷವಾಗಿ ಮಧ್ಯಸ್ಥಿಕೆ ಇಂದಿನ ತುರ್ತು ಅಗತ್ಯವಾಗಿದೆ ಎಂದು ಹೇಳಿದರು.

ಮಧ್ಯಸ್ಥಿಕೆಯು ಈಗ ಕೇವಲ ಒಂದು ಆಯ್ಕೆಯಾಗಿ ಉಳಿದಿಲ್ಲ, ಬದಲಿಗೆ ಅದೊಂದು ಶಾಸನಬದ್ಧ ಆದೇಶವಾಗಿದೆ. ನ್ಯಾಯಾಂಗ ವ್ಯವಸ್ಥೆಯು ಇಂದು ಎದುರಿಸುತ್ತಿರುವ ಅತಿ ದೊಡ್ಡ ಸವಾಲೆಂದರೆ ಪ್ರಕರಣಗಳ ಅಗಾಧ ಬಾಕಿ. ಇಂತಹ ಸಂದರ್ಭದಲ್ಲಿ ನ್ಯಾಯಾಧೀಶರು ಪ್ರಕರಣಗಳನ್ನು ಮಧ್ಯಸ್ಥಿಕೆಗೆ ಒಪ್ಪಿಸುವ ಮೂಲಕ ನ್ಯಾಯಾಲಯದ ಹೊರೆಯನ್ನು ಗಣನೀಯವಾಗಿ ತಗ್ಗಿಸಬಹುದು ಎಂದು ತಿಳಿಸಿದರು.

ನ್ಯಾಯಾಂಗ ಅಧಿಕಾರಿಗಳು ಕೇವಲ ತೀರ್ಪು ನೀಡುವುದಕ್ಕೆ ಸೀಮಿತವಾಗದೆ, ಪ್ರಕರಣಗಳನ್ನು ಆರಂಭಿಕ ಹಂತದಲ್ಲೇ ಮಧ್ಯಸ್ಥಿಕೆಗೆ ಪ್ರೇರೇಪಿಸುವ ಮುಂಚೂಣಿ ಪಾತ್ರ ವಹಿಸಬೇಕು.

ಈ ಮೂಲಕ ಸಮಾಜದಲ್ಲಿ ಸೌಹಾರ್ದತೆ ಕಾಯ್ದುಕೊಳ್ಳಬಹುದು ಎಂದು ಕರೆ ನೀಡಿದರು.

ಬೆಂಗಳೂರಿನ ಕರ್ನಾಟಕ ಮಧ್ಯಸ್ಥಿಕೆ ಕೇಂದ್ರದ ತರಬೇತುದಾರರಾದ ಬೃಂದಾ ನಂದಕುಮಾರ್ ಹಾಗೂ ಜೋಜೋಸೆಫ್ ಅವರು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ಮಧ್ಯಸ್ಥಿಕೆ' ಕುರಿತು ನ್ಯಾಯಾಧೀಶರಿಗೆ ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿ ಚಂದ್ರಶೇಖರ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಜಯನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಎಂ. ರಾಜಶೇಖರ್,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಸಿದ್ದಲಿಂಗ ಪ್ರಭು ಸೇರಿದಂತೆ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ವಿವಿಧ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಮೂರು ಜಿಲ್ಲೆಗಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳು ಸೇರಿದಂತೆ ನ್ಯಾಯಾಂಗ ಅಧಿಕಾರಿಗಳು ಭಾಗವಹಿಸಿದ್ದರು.

# ದೇಹ, ಮನಸನ್ನು ಪ್ರಕೃತಿಯೊಂದಿಗೆ ಜೋಡಿಸುವ ಶಕ್ತಿ ಯೋಗಕ್ಕಿದೆ: ಸಂಸದ ಕೆ.ರಾಜಶೇಖರ ಹಿಟ್ನಾಳ



ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,** ಮನುಷ್ಯನ ದೇಹ ಮತ್ತು ಮನಸ್ಸನ್ನು ಒಂದಾಗಿಸಿ ಪ್ರಕೃತಿಯೊಂದಿಗೆ ಜೋಡಿಸುವ ಮಹಾನ್ ಶಕ್ತಿ ಯೋಗಕ್ಕಿದೆ ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಸರ್ವಯೋಗ ಸಂಸ್ಥೆಗಳ ಸಹಯೋಗದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ-2026ರ ಅಂಗವಾಗಿ ''ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'' ಎಂಬ ಘೋಷವಾಕ್ಯದೊಂದಿಗೆ ಕೊಪ್ಪಳ ತಾಲೂಕು ಕ್ರೀಡಾಂಗಣದಲ್ಲಿ ಭಾನುವಾರ (ಜೂ. 21ರಂದು) ಹಮ್ಮಿಕೊಳ್ಳಲಾಗಿದ್ದ ಯೋಗ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೂನ್ 21 ರಂದು ಇಡೀ ವಿಶ್ವವೇ ಯೋಗ ದಿನವನ್ನು ಆಚರಿಸುತ್ತಿದೆ. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುವಂತಹ ದಿನವಾಗಿದೆ. ಯೋಗದ ಇತಿಹಾಸ ವಿಶೇಷವಾಗಿದೆ. ಯೋಗವು ಸಾವಿರಾರು ವರ್ಷಗಳಷ್ಟು ಹಳೆಯದಾದ ಭಾರತದ ಸಂಸ್ಕೃತಿ ಮತ್ತು ಋಷಿಮುನಿಗಳ ಕೊಡುಗೆಯಾಗಿದೆ. ಯೋಗ ದಿನಾಚರಣೆಯನ್ನು ಜಾಗತಿಕ ಮಟ್ಟದಲ್ಲಿ ಒಂದು ವಿಶೇಷ ದಿನವನ್ನಾಗಿ ಆಚರಿಸುವ ಕುರಿತಂತೆ ಭಾರತವು ಮಾಡಿದ ಪ್ರಸ್ತಾಪಕ್ಕೆ ವಿಶ್ವಸಂಸ್ಥೆಯಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ವಿಶ್ವದ 177 ದೇಶಗಳು ಈ ನಿರ್ಣಯಕ್ಕೆ ಸಹಿ ಹಾಕಿದವು. ಇದರ ಫಲವಾಗಿ 2015ರ ಜೂನ್ 21 ರಂದು ಇಡೀ ವಿಶ್ವದಲ್ಲಿ ಮೊದಲ ಬಾರಿಗೆ ಅಂತರಾಷ್ಟ್ರೀಯ ಯೋಗ ದಿನಾಚರಣೆ'ಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಅಂದಿನಿಂದ ಇಂದಿನವರೆಗೂ ಪ್ರತಿ ವರ್ಷ ಜೂನ್ 21 ರಂದು ವಿಶ್ವದಾದ್ಯಂತ ಯೋಗ ಹಬ್ಬವನ್ನು ಆಚರಿಸಲಾಗುತ್ತಿದ್ ಎಂದರು.

ಇವತ್ತಿನ ಆಧುನಿಕ ಯುಗದಲ್ಲಿ ಯೋಗದ ಮಹತ್ವ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇಂದಿನ ಒತ್ತಡದ ಬದುಕು, ಮಾಲಿನ್ಯ ಮತ್ತು ತಪ್ಪು ಜೀವನಶೈಲಿಯಿಂದಾಗಿ ಮನುಷ್ಯ ರೋಗಗಳ ಗೂಡಾಗುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಯೋಗವು ನಮಗೆ ಸಂಜೀವಿನಿಯಂತೆ ಕೆಲಸ ಮಾಡುತ್ತದೆ. ಯೋಗ ಎಂದರೆ ಕೇವಲ ತೂಕ ಇಳಿಸುವ ಅಥವಾ ದೇಹವನ್ನು ಬಗ್ಗಿಸುವ ಕಸರತ್ತಲ್ಲ, ಅದು ದಿನನಿತ್ಯದ ಆಸನಗಳು, ಪ್ರಾಣಾಯಾಮ ಮತ್ತು ಧ್ಯಾನದ ಮೂಲಕ ನಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮನಸ್ಸಿನ ಆತಂಕ, ಖಿನ್ನತೆ ಮತ್ತು ಒತ್ತಡವನ್ನು ದೂರ ಮಾಡಿ ಮಾನಸಿಕ ಶಾಂತಿಯನ್ನು ನೀಡುತ್ತದೆ. ಯೋಗವನ್ನು ನಾವು ಕೇವಲ ವರ್ಷಕ್ಕೊಮ್ಮೆ ಜೂನ್ 21 ರಂದು ಮಾತ್ರ ಆಚರಿಸುವ ಹಬ್ಬವನ್ನಾಗಿ ಮಾಡಬಾರದು. ಬದಲಿಗೆ, ನಮ್ಮ ದೈನಂದಿನ ಜೀವನದ ಒಂದು ಅವಿಭಾಜ್ಯ ಅಂಗವಾಗಿಸಿಕೊಳ್ಳಬೇಕು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, ಯೋಗವು ಭಾರತದ ಭವ್ಯ ಪರಂಪರೆಯ ಪ್ರತೀಕವಾಗಿದೆ. ಪ್ರತಿದಿನದ ಯೋಗಾಭ್ಯಾಸ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಲಿದೆ. ಪ್ರಧಾನಿ ನರೇಂದ್ರ ಮೋದಿಜಿಯವರ ಪ್ರಯತ್ನದಿಂದ ವಿಶ್ವದಾದ್ಯಂತ ಯೋಗ ದಿನಾಚರಣೆಯನ್ನು ಆಚರಿಸುವ ಮೂಲಕ ಯೋಗದ ಮಹತ್ವವನ್ನು ಜಗತ್ತಿಗೆ ತಿಳಿಸಲಾಗಿದೆ. ಒತ್ತಡದ ಜೀವನದಲ್ಲಿ ಪ್ರತಿಯೊಬ್ಬರಿಗೂ ಯೋಗ ಬಹಳ ಮುಖ್ಯವಾಗಿದೆ. ''ಯೋಗ ಭಾರತ-365'' ಕಾರ್ಯಕ್ರಮದ ಮೂಲಕ ಆಯುಷ್ ಇಲಾಖೆಯ ಪ್ರತಿನಿತ್ಯ ಆನ್‌ಲೈನ್ ಮೂಲಕ ಯೋಗ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಂತೋಷದ ಸಂಗತಿಯಾಗಿದೆ ಎಂದರು.

ಪುಟ್ಟ ಬಾಲಕ ಅಗಸ್ತ್ಯ ಅರಕೇರಿ, ವಿದ್ಯಾರ್ಥಿನಿ ರೇಷ್ಮಾ ಹಾಗೂ ಸಂಗಡಿಗರು ಮತ್ತು ಕುಮಾರ ಸಿದ್ದಾರ್ಥ ಅವರಿಂದ ನಡೆದ ವಿಶೇಷ ಯೋಗ ಪ್ರದರ್ಶನ ಗಮನ ಸೆಳೆಯಿತು. ಈ ಎಲ್ಲಾ ಮಕ್ಕಳಿಗೆ ಹಾಗೂ ಯೋಗ ತರಬೇತಿ ನೀಡಿದ ಯೋಗ ಶಿಕ್ಷಕರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ. ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ದರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳಾದ ಟಿ.ಕೃಷ್ಣಮೂರ್ತಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪಿ.ಬಿ.ಹಿರೇಗೌಡರ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ್, ಜಿಲ್ಲಾ ಕ್ರೀಡಾ ಅಧಿಕಾರಿಗಳಾದ ವಿಠ್ಠಲ್ ಬಿ.ಜಾಬಗೌಡರ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಎ.ಬಸವರಾಜ, ಕೊಪ್ಪಳ ತಾಲ್ಲೂಕು ಪಂಚಾಯತ ಇಓ ದುಂಡಪ್ಪ ತುರಾದಿ, ಕೊಪ್ಪಳ ಜಿಲ್ಲೆಯ ಆಯುಷ್ ವೈದ್ಯಾಧಿಕಾರಿಗಳಾದ ಡಾ. ಗುರುರಾಜ್ ಉಮಚಗಿ, ಡಾ. ವಿ.ಆರ್ ತಾಳಿಕೋಟಿ, ಡಾ. ಶರಣಪ್ಪ ಹೈದ್ರಿ, ಡಾ. ರಾಜಶೇಖರ ನಾರಿನಾಳ, ಡಾ. ಕವಿತಾ ಹೆಚ್.ಎಫ್. ಹಾಗೂ ಇತರೆ ವೈದ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂಧಿಗಳು, ವಿವಿಧ ಯೋಗ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಶಾಲಾ ಕಾಲೇಜುಗಳ ವಿಧ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರತಿ ಮನೆಯಲ್ಲಿ ಅಮೃತ ಬಳ್ಳಿ ಬೆಳಸಬೇಕು ಎಂಬ ಉದ್ದೇಶದಿಂದ ಆಯುಷ್ ಇಲಾಖೆಯಿಂದ ಅಮೃತ ಬಳ್ಳಿಯ ತುಂಡುಗಳ ವಿತರಣೆ ಮಾಡಲಾಯಿತು.

## ಆರೋಗ್ಯ ಶಿಬಿರದ ಸದುಪಯೋಗ ಪಡೆಯಿರಿ - ಚಿಟಕಿ ಹುಸೇನ್



ಕನ್ನಡ ಮಾತೃ ಭೂಮಿ ವಾರ್ತೆ

**ಸಿರುಗುಪ್ಪ,**ಬದಲಾದ ಜೀವನ ಶೈಲಿ ಮತ್ತು ಒತ್ತಡದ ಬದುಕಿನ ಇಂದಿನ ದಿನಗಳಲ್ಲಿ ಜನರಲ್ಲಿ ಆರೋಗ್ಯ ಸಮಸ್ಯೆ ಹೆಚ್ಚುತ್ತಿದೆ ಇದರ ನಿವಾರಣೆಗೆ ಆರೋಗ್ಯ ಶಿಬಿರ ಸಹಕಾರಿ ಎಂದು ಸಮಾಜ ಸೇವಕರು ಹಾಗೂ ಮುಸ್ಲಿಂ ಈದ್ಗಾ ಮತ್ತು ಖಬರ ಸ್ಥಾನ್ ಕಮಿಟಿ ಮಾಜಿ ಅಧ್ಯಕ್ಷ ಚಿಟಿಕಿ ಹುಸೇನ್ ಹೇಳಿದರು ನಗರದ ಮುಸ್ಲಿಂ ಈದ್ಗಾ ಮತ್ತು ಖಬರ ಸ್ಥಾನ್ ಕಮಿಟಿಯ ವಾಣಿಜ್ಯ ಸಂಕೀರ್ಣದ ಆವರಣದ ಮುಂದೆ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾ ಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಿಲೆ ಬರುವ ಮುನ್ನವೇ ಎಚ್ಚರವಹಿಸಿದರೆ ಆಸ್ಪತ್ರೆ ಗುಳಿಗೆ ಮುಂತಾದ ಕಷ್ಟಗಳಿಂದ ಪಾರಾಗಬಹುದು ಹಳ್ಳಿಗಳಲ್ಲೂ ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಿ

ಅರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು ಆರೋಗ್ಯ ಇದ್ದರೆ ನಾವು ಸುಖ ವಾಗಿ ಬಾಳಬಹುದು ಕಷ್ಟಪಟ್ಟು ದುಡಿದ ಹಣವನ್ನು ಆಸ್ಪತ್ರೆಗೆ ಸುರಿಯುವ ಮೊದಲು ಕಾಯಿಲೆ ಬರದಂತೆ ತಡೆಯುವುದು ಜಾಣತನ ಎಂದು ಅವರು ಹೇಳಿದರಲ್ಲದೇ ಅನೇಕ ರೋಗಗಳಿಂದ ಬಳಲುವ ಸಾಮಾನ್ಯ ಮತ್ತು ಬಡ ಜನರಿಗೆ ನೆರವಾಗಲಿ ಎಂಬ ಉದ್ದೇಶದಿಂದ ಹಲವು ರೋಗಗಳ ಉಚಿತ ತಪಾಸಣೆಯನ್ನು ರಾಯಲ್ ಪಾಲಿ ಕ್ಲಿನಿಕ್ ಸಹಯೋಗದಲ್ಲಿ ಆಯೋಜಿಸಲಾಗಿದೆ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಚಿಟಕಿ ಹುಸೇನ್ ಹೇಳಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಈದ್ಗಾ ಮತ್ತು ಖಬರಸ್ಥಾನ್ ಕಮೀಟಿಯ ಉಪಾಧ್ಯಕ್ಷರು ಅಹಮದ್ ಷರೀಫ್, ಕಾರ್ಯದರ್ಶಿ ಮೊಹಮ್ಮದ್ ಅಜೀಮ್, ಖಜಾಂಚಿ ಎಂ. ಖಾದರ್ ವಲಿ, ಹಾಗೂ ಸದಸ್ಯರುಗಳಾದ ಬಾಷಾ, ಫುಜೈಲ್ ಅಹಮದ್, ಇಬ್ರಾಹಿಂಪುರ್ ಹಮೀದ್ ಸಾಬ್, ಅನ್ಸಾರಿ ಇಸಾಕ್, ಎಂ. ಖಾಜಾ, ಚೌದ್ರಿ ನಜೀರ್ ಅಹ್ಮದ್, ಡೊಳ್ಳಿ ವಲಿ ಸೇರಿದಂತೆ ಸಮುದಾಯದ ಹಿರಿಯರು ನಾಗರಿಕರು ಉಪಸ್ಥಿತರಿದ್ದರು.

## ಕನ್ನಡದ ಕಹಳೆ ಮೊಳಗಿತು; ಬೀದರ್ ಬೀದಿಗಳಲ್ಲಿ ಭುವನೇಶ್ವರಿ ರಥಯಾತ್ರೆಯ ಸಂಭ್ರಮ

# ರಾಜ್ಯಮಟ್ಟದ ಗಡಿನಾಡು ಕನ್ನಡ ಜಾಗೃತಿ ಸಮಾವೇಶಕ್ಕೆ ಅದ್ದೂರಿ ಚಾಲನೆ

ಕನ್ನಡ ಮಾತೃ ಭೂಮಿ ವಾರ್ತೆ



**ಬೀದರ್,** ಕನ್ನಡ ನಾಡು-ನುಡಿ, ಸಂಸ್ಕೃತಿ ಮತ್ತು ಕನ್ನಡಾಭಿಮಾನದ ಸಂದೇಶ ಸಾರುವ ಉದ್ದೇಶದಿಂದ ಕನ್ನಡ ಸೇನೆ ಕರ್ನಾಟಕ ಸಂಘಟನೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ದ್ವಿತೀಯ ಗಡಿನಾಡು ಕನ್ನಡ ಜಾಗೃತಿ ಸಮಾವೇಶದ ಅಂಗವಾಗಿ ನಗರದಲ್ಲಿ ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರದ ಭವ್ಯ ಮೆರವಣಿಗೆ ಸಂಭ್ರಮದಿಂದ ನಡೆಯಿತು.

ಅಲಂಕೃತ ರಥದಲ್ಲಿ ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರವನ್ನು ಪ್ರತಿಷ್ಠಾಪಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಬಸವೇಶ್ವರ ವೃತ್ತದಿಂದ ಆರಂಭವಾದ ಮೆರವಣಿಗೆಯು ಮಹಾವೀರ ವೃತ್ತ, ಭಗತ್ ಸಿಂಗ್ ವೃತ್ತ ಸೇರಿದಂತೆ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ಸಮೀಪದ ಸಮಾವೇಶ ಸ್ಥಳಕ್ಕೆ ತಲುಪಿತು.

ಮೆರವಣಿಗೆಯಲ್ಲಿ ಲಂಬಾಣಿ ನೃತ್ಯ, ಡೊಳ್ಳು ಕುಣಿತ ಹಾಗೂ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನಗಳು ಜನರ ಗಮನ ಸೆಳೆದವು. ಕಲಾವಿದರ ವರ್ಣರಂಜಿತ ಪ್ರದರ್ಶನಗಳು ಮತ್ತು ಯುವಕರ ಉತ್ಸಾಹಭರಿತ ಹೆಜ್ಜೆಗಳು ಕನ್ನಡಾಭಿಮಾನವನ್ನು ಮತ್ತಷ್ಟು ಹೆಚ್ಚಿಸಿತು. ಕನ್ನಡ ತಾಯಿ ಭುವನೇಶ್ವರಿಗೆ ಜಯವಾಗಲಿ, ಜೈ ಕರ್ನಾಟಕ ಎಂಬ ಘೋಷಣೆಗಳಿಂದ ನಗರದ ವಾತಾವರಣ ಕನ್ನಡಮಯವಾಗಿತ್ತು.

ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಸಮಾವೇಶವನ್ನು ಆಯೋಜಿಸಲಾಗಿದ್ದು, ನೂರಾರು ಕನ್ನಡಾಭಿಮಾನಿಗಳು ಮೆರವಣಿಗೆಯಲ್ಲಿ ಭಾಗವಹಿಸಿ ಕನ್ನಡದ ಮೇಲಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೈ ಭಾರತ ಮಾತಾ ರಾಷ್ಟ್ರೀಯ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜ್, ಕನ್ನಡ ಸೇನೆ ಕರ್ನಾಟಕದ ರಾಜ್ಯಾಧ್ಯಕ್ಷ ಕೆ.ಆರ್. ಕುಮಾರ್, ಉಪಾಧ್ಯಕ್ಷ ರವಿ ಸ್ವಾಮಿ ನಿರ್ಣಾ, ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ್ ಕೆನಾಡೆ, ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ರಾಜಶೇಖರ ಜಿ, ಡಾ. ಮಾರುತಿ, ತುಳಸಿ ವಾಘಮಾರೆ, ಶಿವಕುಮಾರ, ಅಶೋಕ್ ಗಾದಗಿ, ಕುಮಾರ್, ಸೂರ್ಯಕಾಂತ, ಅಡೆಪ್ಪ, ಸ್ವಾಮಿದಾಸ್, ಸಂತೋಷ್, ಗೀತಾ, ಜ್ಯೋತಿ ಸೇರಿದಂತೆ ಅನೇಕ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

# ಯೋಗವೇ ಆರೋಗ್ಯದ ಕೀಲಿಕೈ ದೇಹ-ಮನಸ್ಸಿನ ಸಮತೋಲನಕ್ಕೆ ಮಹಾನ್ ಜೀವನ ವಿಜ್ಞಾನ: ಯೋಗ ಸಂಶೋಧಕ ಭೀಮಾಶಂಕರ ಬೆನಕನಹಳ್ಳಿ

ಕನ್ನಡ ಮಾತೃ ಭೂಮಿ ವಾರ್ತೆ



**ಯಾದಗಿರಿ,**ಮಾನವನ ದೇಹವೇ ಪ್ರಕೃತಿಯ ಅದ್ಭುತ ಸೃಷ್ಟಿಯಾಗಿದ್ದು, ಅದರ ಆರೋಗ್ಯದ ಕೀಲಿಕೈ ಯೋಗದಲ್ಲಿದೆ ಎಂದು ಯೋಗ ಸಂಶೋಧಕ ಭೀಮಾಶಂಕರ ಬೆನಕನಹಳ್ಳಿ ಅವರು ಅಭಿಪ್ರಾಯಪಟ್ಟರು.

ನಗರದ ಭಾರತೀಯ ವಿದ್ಯಾಕೇಂದ್ರದಲ್ಲಿ ಭಾರತೀಯ ವಿದ್ಯಾಕೇಂದ್ರ ವಿಶ್ವಸ್ಥ ಮಂಡಳಿ, ಕಲಬುರಗಿ ಸಂಚಾಲಿತ ಮಾತೃಶ್ರೀ ಸಂಗಮ್ಮ ಶಿವಶರಣಪ್ಪ ಪಾಟೀಲ (ಕಡಗಂಚಿ) ಬಾಲಕರ ನಿಲಯ ಪ್ರೌಢಶಾಲೆ ಹಾಗೂ ಮಾತೃಶ್ರೀ ಸಂಘವಿ ಮರಗಾಬಾಯಿ ಬಾಬುಲಾಲ್ ಜೈನ್ (ಶಹಾಪುರ) ನಿಲಯ ಹಿರಿಯ ಪ್ರಾಥಮಿಕ ಶಾಲೆ, ಸಿರನೂರ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಆಧುನಿಕ ಜೀವನದ ಒತ್ತಡ, ಆತಂಕ ಮತ್ತು ಅನಾರೋಗ್ಯದ ನಡುವೆಯೂ ದೇಹ, ಮನಸ್ಸು ಹಾಗೂ ಆತ್ಮದ ಸಮತೋಲನವನ್ನು ಸಾಧಿಸುವ ಮಹಾನ್ ಜೀವನ ವಿಜ್ಞಾನವೇ ಯೋಗವಾಗಿದೆ ಎಂದು ಅವರು ಹೇಳಿದರು. ಯೋಗವೆಂದರೆ ಕೇವಲ ಆಸನಗಳ ಪ್ರದರ್ಶನವಲ್ಲ; ಅದು ಮನುಷ್ಯನನ್ನು ತನ್ನೊಳಗಿನ ಶಕ್ತಿಯೊಂದಿಗೆ ಜೋಡಿಸುವ ಆತ್ಮಸಾಕ್ಷಾತ್ಕಾರದ ಪಯಣವಾಗಿದೆ ಎಂದು ತಿಳಿಸಿದರು.

ಮಾನವನ ದೇಹದಲ್ಲಿರುವ ಎಲ್ಲಾ ರಕ್ತನಾಳಗಳನ್ನು ಒಂದರ ಪಕ್ಕ ಒಂದು ಜೋಡಿಸಿದರೆ ಅವು ಸುಮಾರು ಒಂದು ಲಕ್ಷ ಕಿಲೋಮೀಟರ್ ಉದ್ದವಿರುತ್ತವೆ. ಇದು ಭೂಮಿಯ ಸುತ್ತಳತೆಯನ್ನು ಎರಡು ಬಾರಿ ಮೀರಿ ಸುತ್ತುವಷ್ಟು ದೂರವಾಗಿದ್ದು, ಇಂತಹ ಸಂಕೀರ್ಣ ದೇಹ ವ್ಯವಸ್ಥೆಯನ್ನು ಸಮತೋಲನದಲ್ಲಿಡಲು ಯೋಗದಂತಹ ಸಮಗ್ರ ಜೀವನಶೈಲಿ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಹೃದಯವು ಕ್ಷಣಮಾತ್ರವೂ ವಿಶ್ರಾಂತಿ ಪಡೆಯದೆ ನಿರಂತರವಾಗಿ ರಕ್ತವನ್ನು ಪಂಪ್ ಮಾಡುತ್ತಿರುತ್ತದೆ. ಈ ನಿರಂತರ ಚಲನೆಯಲ್ಲಿ ದೇಹದ ಆರೋಗ್ಯ, ಮನಸ್ಸಿನ ನೆಮ್ಮದಿ ಹಾಗೂ ಜೀವನದ ಉತ್ಸಾಹವನ್ನು ಉಳಿಸಿಕೊಳ್ಳಲು ಯೋಗವು ಅಮೃತದಂತೆ ಕಾರ್ಯನಿರ್ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಯೋಗವು ವೇದಗಳು ಮತ್ತು ಉಪನಿಷತ್ತುಗಳಲ್ಲಿ ಉಲ್ಲೇಖಗೊಂಡಿದೆ. ಭಾರತದ ಋಷಿಮುನಿಗಳ ತಪಸ್ಸಿನ ಫಲವಾಗಿರುವ ಯೋಗಕ್ಕೆ ಇಂದು ವಿಶ್ವಮಟ್ಟದಲ್ಲಿ ಅಪಾರ ಮಾನ್ಯತೆ ದೊರೆತಿದ್ದು, ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 177 ರಾಷ್ಟ್ರಗಳು ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಬೆಂಬಲ ಸೂಚಿಸಿರುವುದು ಯೋಗದ ಸಾರ್ವತ್ರಿಕ ಮಹತ್ವಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಯೋಗದಲ್ಲಿ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ರಾಜಯೋಗ, ಹಠಯೋಗ, ಮಂತ್ರಯೋಗ ಹಾಗೂ ಕುಂಡಲಿನಿ ಯೋಗ ಸೇರಿದಂತೆ ಅನೇಕ ಮಾರ್ಗಗಳಿವೆ. ನಿಸ್ವಾರ್ಥ ಸೇವೆಯೇ ಕರ್ಮಯೋಗದ ಮೂಲವಾಗಿದ್ದರೆ, ಭಕ್ತಿಯ ಮೂಲಕ ಮನಸ್ಸಿನ ಪರಿಶುದ್ಧತೆಯನ್ನು ಸಾಧಿಸುವುದು ಭಕ್ತಿಯೋಗದ ಉದ್ದೇಶವಾಗಿದೆ. ಜ್ಞಾನಯೋಗವು ಸತ್ಯ ಮತ್ತು ಆತ್ಮಜ್ಞಾನದ ಅರಿವನ್ನು ಮೂಡಿಸಿದರೆ, ರಾಜಯೋಗವು ಧ್ಯಾನ ಮತ್ತು ಏಕಾಗ್ರತೆಯ ಮೂಲಕ ಆಂತರಿಕ ಶಾಂತಿಗೆ ದಾರಿ ತೋರಿಸುತ್ತದೆ ಎಂದು ವಿವರಿಸಿದರು.

ಹಠಯೋಗವು ದೇಹವನ್ನು ಸದೃಢಗೊಳಿಸಿ ಮನಸ್ಸನ್ನು ಸ್ಥಿರಗೊಳಿಸಿದರೆ, ಮಂತ್ರಯೋಗವು ಜಪದ ಶಕ್ತಿಯ ಮೂಲಕ ಚಿತ್ತಶುದ್ಧಿಯನ್ನುಂಟು ಮಾಡುತ್ತದೆ. ಕುಂಡಲಿನಿ ಯೋಗವು ಮನುಷ್ಯನೊಳಗಿನ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಿ ಉನ್ನತ ಚೈತನ್ಯದತ್ತ ಕೊಂಡೊಯ್ಯುತ್ತದೆ ಎಂದು ಹೇಳಿದರು.

ಯೋಗವು ರೋಗದಿಂದ ಮುಕ್ತಿ ನೀಡುವುದಷ್ಟೇ ಅಲ್ಲ, ಭೋಗ ಮತ್ತು ಯೋಗದ ನಡುವೆ ಸಮತೋಲನ ಕಲಿಸುವ ಜೀವನ ದರ್ಶನವಾಗಿದೆ.

ದೇಹಕ್ಕೆ ಆರೋಗ್ಯ, ಮನಸ್ಸಿಗೆ ಪ್ರಶಾಂತತೆ ಮತ್ತು ಆತ್ಮಕ್ಕೆ ದಿವ್ಯತೆಯನ್ನು ನೀಡುವ ಅದ್ಭುತ ಸಾಧನೆಯೇ ಯೋಗ ಎಂದು ಭೀಮಾಶಂಕರ ಬೆನಕನಹಳ್ಳಿ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಹಿರಿಯ ಸದಸ್ಯ ಚನ್ನವೀರಪ್ಪ ಗುಡ್ಡಾ, ದೈಹಿಕ ಶಿಕ್ಷಕ ಜಲಂಧರವಾಡಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಚಿದಾನಂದ ಬಳ್ಳೂರ್ಗಿ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶಿವಾನಂದ ಶಿರ್ವಾಡ ಸೇರಿದಂತೆ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳ ಆಡಳಿತಾಧಿಕಾರಿಗಳು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

# ಹಿಂದೂ ಮುಸ್ಲಿಮರ ಭಾವೈಕ್ಯತೆ ಶಾಂತಿ ಸಹೋದರತೆಯ ದೀನ್ ಜಗಾಯಿಸುವ ಇಸ್ಲಾಂ ಸಂಸ್ಕೃತಿ ಹೊಸ ವರ್ಷ ಮೊಹರಂ ಹಬ್ಬ

ಕನ್ನಡ ಮಾತೃ ಭೂಮಿ ವಾರ್ತೆ

**ಸಿರುಗುಪ್ಪ,** ತಾಲ್ಲೂಕಿನಾದ್ಯಂತ ಸರ್ವಧರ್ಮೀಯರ ಎಲ್ಲರೂ ಒಗ್ಗೂಡಿ ವಿವಿಧ ಸಂಪ್ರದಾಯ ಸಂಸ್ಕಾರ ಮನೆ ಮನ ತನು ಧನ ಮೊದಲಾದ ಸಮಸ್ಯೆಗಳ ಪರಿಹಾರದ ಹರಕೆ ಮಾಡಿಕೊಂಡು ತೀರಿಸುವ ಪರಸ್ಪರ ಪ್ರೀತಿ ಉತ್ಸಾಹ ಹೊಸತನ ಸಂತೋಷದ ಹಿಂದು ಮುಸ್ಲಿಮರ ಭಾವೈಕ್ಯತೆ ಶಾಂತಿ ಸಹೋದರತೆಯ ದೀನ್ ಜಗಾಯಿಸುವ ಇಸ್ಲಾಂ ಸಂಸ್ಕೃತಿ ಹೊಸ ವರ್ಷ ಮೊಹರಂ ಹಬ್ಬ ಶುರು ಜೂನ್ 17 ರಿಂದ ಜೂನ್ 26 ರ ವರೆಗೆ 10 ದಿನಗಳ ಕಾಲ ಪರಿಸರದಲ್ಲಿ ವಿಶಿಷ್ಟವಾದಂತಹ ಸಾಂಸ್ಕೃತಿಕ ಮೊಹರಂ ಹಬ್ಬದ ಆಚರಣೆ ನಗರದ ಹಜರತ್ ಇಮಾಮ್ ಹುಸ್ಸೈನ್ ಸೌದಾಗರ್ ಪಂಜಾ ಆಶುರ್ ಖಾನಾ ಮಸೀದಿಯ ಹುಸೇನಿ ಸಾಹೇಬ್ ಅವರ ನಾಲ್ಕನೇ ದಿನವಾದ ಶನಿವಾರ ರಾತ್ರಿ ಹುಸೇನಿ ಸಾಹೇಬ್ ಪೀರ ದೇವರ ಪಂಜಾ ಫಿಟಾರಾ (ಪೆಟ್ಟಿಗೆ) ಉತ್ಸಹ ಮುಲ್ಲಾ ಸಾಹೇಬರ ನಿವಾಸದಲ್ಲಿ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ ಎಂ ನಾಗರಾಜ ಅವರ ನೇತೃತ್ವದಲ್ಲಿ ಖುರಾನ್ ಫಾತಿಹಾ ಖಾನಿ ಓದಿಕೆ ದರ್ಶನದೊಂದಿಗೆ ದೀನ್ ಜಗಾಯಿಸಿದರು.

ಖತೀಬ್ ಜಹೀರುದ್ದೀನ್ ಬಾಬು, ಹಾಜಿ ಚೌದ್ರಿ ಖಾಜಾ ಸಾಬ್, ದೇಶನೂರು ಹಾಜಿ ಅಬ್ದುಲ್ ಗಫೂರ್ ಸಾಬ್, ಜಿಲ್ಲಾ ವಕ್ಫ್ ಮಾಜಿ ಸದಸ್ಯ ಹಾಜಿ ಅಬ್ದುಲ್ ನಬಿ ನವರ ಪುತ್ರ ಎ.ಮೊಹಮ್ಮದ್ ನೌಷಾದ್ ಅಲಿ, ಆದೋನಿ ಬಿ. ಗೋವಿಂದಪ್ಪ, ಬಿ.ಎಂ.ಮಣಿಕಂಠ ನಾಯಕ್, ಹಂಡಿ ಅಬ್ದುಲ್ ರಹೀಂ ಸಾಬ್, ಲತೀಫ್ ಬಾಯಿ ಮೊಹಮ್ಮದ್ ಆಜಮ್, ಹಂಡಿ ಶಾಹಿದ್, ಹಂಡಿ ಹುಸೇನ್,ಎ.ಟಿ. ಇಬ್ರಾಹಿಂ, ಸುನಾರ್ ಆಜೀಮ್, ಪತ್ತಾರ್ ಸೀನಾ, ಪತ್ತಾರ್ ಶಿವಶಂರ್ಕರ, ಪತ್ತಾರ್ ಬಸವರಾಜ್, ಡಿ.ಹಮೀದ್, ತೀನ್ ಸುಳಿ ಹುಸೇನ್, ಮೊಹಮ್ಮದ್ ಮುನವರ್ ಜಿ., ವೈ.ಸಾಬು, ಸಿಂಧನೂರು ನಿಯಾಜ್, ರಾಜ, ಛೋಟಾ ಶಾಮೀದ್, ಬಡ ಶಾಮೀದ್, ಆಲಂಬಾಷಾ, ಬಂಡಿ ಶೆಕ್ಷವಲಿ, ಬಂಡಿ ಚಾಂದ್, ಅಲ್ಲಾಭಕ್ಷಿ, ಬಿ.ವೆಂಕಟೇಶ್, ಹೆಚ್. ಗಣೇಶ್, ಜಾಜಿ ರಾಮು, ಪವನ್ ದೇಸಾಯಿ, ಸೇರಿದಂತೆ ಸಾವಿರಾರು ಜನ ಭಾಗವಹಿಸಿದ್ದರು ಶ್ರದ್ಧಾ ಭಕ್ತಿಯಿಂದ ಶಹನಾಯಿ, ವಾದ್ಯ,ಹಲಗೆ ತಪ್ಪಡಿ ಬಾರಿಸುವ ಮೂಲಕ ಜನರ ಮುಗಿಲು ಮುಟ್ಟುವಂತೆ ಪೆಟ್ಟಿಗೆ ಉತ್ಸಹ ಮೆರವಣಿಗೆ ಮಸೀದಿಗೆ ತೆರಳಿತು ಜನರು ದರ್ಶನ ಪಡೆದರು

ನಗರದ ಬಡಿ ಮಸೀದಿ, ಕೊಪ್ಪಳ ಮಸೀದಿ, ಚಾವಲ್ ಮಸೀದಿ, ವಲ್ಲೂರ್ ಮಸೀದಿ, ಓಡಾ ಬಾಡೆ, ಝೂಡಕೆ, ನಿಜಾಮಿಯ ಮಸೀದಿ, ಮೊದಲಾದ ಮೊಹಲ್ಲಾದ ಆಶುರ್ ಖಾನಾಗಳಲ್ಲಿ ಚಂದ್ರದ ಆಕಾರ, ರೂಟ್ ಆಕಾರ,1 ಗೆರೆ, 2 ಗೆರೆ, 3 ಗೆರೆ, 5 ಗೆರೆ ಗಳ ಉಳ್ಳ ಆಕಾರಗಳ ಪೀರ್ ದೇವರು ಪಂಜಾಗಳನ್ನು ಪ್ರತಿಷ್ಠಾಪನೆದೊಂದಿಗೆ ಕೂಡಿಸಿದರು.

6ನೇ ದಿನ ಅಬ್ಬಾಸ್ ಅಲಿ, 7ನೇ ದಿನ ಇಮಾಮೆ ಖಾಸಿಂ,8 ನೇ ದಿನ ಅಕ್ಬರ್ ಅಲಿ ಜಿಗಳಿ ಸಾಹೇಬ್, 9ನೇ ದಿನ ಖತಲ್ ರಾತ್ರಿ 10ನೇ ದಿನ ದಫನ್ ಬಡೆ ಮೌಲಾ ಅಲಿ ಇಮಾಮ್ ಹಸೇನ್ ಇಮಾಮೆ ಹುಸೇನ್ ಮೊದಲಾದ ದೇವರುಗಳ ಭವ್ಯ ಉತ್ಸವದ ಮೆರವಣಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವವು ಮೊಹರಂ ಹಬ್ಬದಲ್ಲಿ ಅಲಾವಾ ಕುಣಿತಕ್ಕೆ ಹೆಜ್ಜೆಕುಣಿತ ಬಾಜಾ ಭಜಂತ್ರಿ, ತಾಷ ಹಲಗೆ ಬಾರಿಸುವುದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ಜರಗುತ್ತವೆ.

